# ನೇಸರು

ತಿಂಗಳೋಲೆ

₹ 5/-

PAGES 20

MAY 2022 | Nesaru Tingalole | Vol. XL - 5






ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ಅಸೋಸಿಯೇಷನ್‌ನಲ್ಲಿ "ಅಕ್ಷಯ ತೃತೀಯ" ಪೂಜೆ

ಮೇ 03, 2022ರಂದು ಅಸೋಸಿಯೇಷನ್‌ನಲ್ಲಿ 'ಅಕ್ಷಯ ತೃತಿಯ' ಪೂಜೆಯನ್ನು ಶ್ರೀಮತಿ ಮತ್ತು ಶ್ರೀ ನಾರಾಯಣ ನವಿಲೇಕರ್‌ರವರು ನೆರವೇರಿಸಿದರು.











ಸಂಪಾದಕೀಯ

ನೇಸರು ತಿಂಗಳೋಲೆ

ಸಂಪುಟ 40 | ಮೇ–2022 | ಸಂಚಿಕೆ 5

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
ನೀಲಕಂಠ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎನ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

- Ed.

****

ಸಂಪರ್ಕ ವಿಳಾಸ:

ನೇಸರು

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ
ಮುಂಬಯಿ – 400 019.
☎24024647 / 24037065

Email:
Mysoreassociation.mumbai@gmail.com

Website:
www.mysoreassociation.in

# ಜೀವನವನ್ನು ಆನಂದಿಸಿ



✍ ಡಾ. ಜ್ಯೋತಿ ಸತೀಶ್

ನಮ್ಮ ಬದುಕು ಅನ್ನೋದು ನಿಂತ ನೀರಲ್ಲ. ಅದು ಚಲನಶೀಲವಾದುದು. ನಮ್ಮ ನಮ್ಮ ಬದುಕನ್ನು ಸುಗಮವಾಗಿಸಲು ನಾವು ಒಂದಲ್ಲ ಒಂದು ಕಾರಣದಿಂದ, ಎಲ್ಲದರ ಹಿಂದೆ ಪ್ರತಿದಿನ ಓಡುತ್ತಿರುತ್ತೇವೆ. ಜೀವನದಲ್ಲಿ ಸುಖವನ್ನು ಹುಡುಕುತ್ತಾ, ನಮ್ಮ ಅರ್ಧ ಆಯುಷ್ಯವನ್ನು ಸುಖದ ಹಿಂದೆ ಓಡುವುದರಲ್ಲೇ ಕಳೆದುಕೊಳ್ಳುತ್ತೇವೆ. ಜೀವನವನ್ನು ಮನಸಾರೆ ಆನಂದಿಸಬೇಕೆಂಬ ಸತ್ಯವನ್ನು ತಿಳಿಯದೆ ವ್ಯರ್ಥಮಾಡುತ್ತೇವೆ. ನಾಳಿನ ಚಿಂತೆಯನ್ನು ಬಿಟ್ಟು ಇವತ್ತಿನ ದಿನವನ್ನು, ಪ್ರತಿಕ್ಷಣವನ್ನು ಹೊಸತನದೊಂದಿಗೆ ಕಳೆಯುವತ್ತ ಚಿತ್ತ ಹರಿಸಬೇಕು. ಮನುಷ್ಯ ಜನ್ಮ ಶ್ರೇಷ್ಠವಾದುದು ಅಂತ ಹೇಳುತ್ತಾರೆ. ಆದರೆ ಮನುಷ್ಯನ ಬದುಕಿಗಿಂತ ಆಕಾಶದಲ್ಲಿ ಹಾರಾಡುವ ಹಕ್ಕಿಗಳ ಬದುಕು ಎಷ್ಟೊಂದು ಆನಂದಮಯವಾದುದಲ್ಲವೇ? ನಾಳೆಯ ಚಿಂತೆಯಿಲ್ಲ. ಸಮಾಜದವರ ಭಯವಿಲ್ಲ. ಒಣ ಜಂಭ, ಪ್ರತಿಷ್ಠೆಗಳಿಂದ ಮುಕ್ತವಾಗಿ, ನಿಶ್ಚಿಂತೆಯಿಂದ ತನ್ನ ಪಾಡಿಗೆ ತಾನು ಹಾರಾಡಿಕೊಂಡು ಇರುವುದು ಎಷ್ಟೊಂದು ಸುಖಮಯವಾದುದು. ಈ ಸಂದರ್ಭದಲ್ಲಿ ಎಲ್ಲೋ ಓದಿದ ಒಂದು ಕಥೆ ನೆನಪಾಗುತ್ತದೆ.

ಒಂದು ಹಳ್ಳಿಯಲ್ಲಿ ಒಬ್ಬ ಮುದುಕ ವಾಸಿಸುತ್ತಿದ್ದ. ಅವನು ಆ ಹಳ್ಳಿಯ ಅತ್ಯಂತ ದುರದೃಷ್ಟಕರ ವ್ಯಕ್ತಿಗಳಲ್ಲಿ ಒಬ್ಬನಾಗಿದ್ದ. ಇಡೀ ಹಳ್ಳಿ ಅವನಿಂದ ಬೇಸತ್ತಿತ್ತು. ಆ ಮುದುಕ ಬಾಯಿ ತೆರೆದರೆ ಸಾಕು, ಯಾವಾಗಲೂ ದೂರು ನೀಡುವುದೇ ಕೆಲಸ. ಯಾವಾಗ ನೋಡಿದರೂ ಕೆಟ್ಟ ಮನಸ್ಥಿತಿಯಲ್ಲಿರುತ್ತಿದ್ದ. ಅವನ ಜೊತೆ ಇದ್ದಷ್ಟು ಕಾಲ ಜನರಿಗೆ ಅವನ ಮೇಲೆ ಕೋಪ ಬರುತ್ತಿತ್ತು. ಅಲ್ಲದೆ ಆ ಮುದುಕನ ಬಾಯಲ್ಲಿ ಯಾವತ್ತೂ ಒಳ್ಳೆಯ ಮಾತುಗಳು ಬರುತ್ತಿರಲಿಲ್ಲ. ಅವನ ಮಾತುಗಳು ವಿಷಪೂರಿತವಾಗಿದ್ದವು. ಜನರು ಅವನಿಂದ ತಪ್ಪಿಸಿಕೊಂಡು ಓಡಾಡುತ್ತಿದ್ದರು. ಅವನು ಎಲ್ಲಿಯಾದರೂ ದಾರಿಯಲ್ಲಿ ಸಿಕ್ಕಿದರೆ, ದಾರಿಯಲ್ಲಿ ಬೆಕ್ಕು ಕಂಡಂತೆ ಆ ದಾರಿಯನ್ನೇ ಬಿಟ್ಟು ಬೇರೆ ದಾರಿಯನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಅವನ ಜೊತೆ ಇದ್ದರೆ, ಅವನ ದುರದೃಷ್ಟವು ತಮಗೂ ತಾಗಬಹುದು, ಅವನಲ್ಲಿರುವ ಅತೃಪ್ತಿಯ ಭಾವನೆ ನಮ್ಮನ್ನೂ ಕಾಡಬಹುದೆಂಬ ಭಯ, ಹಳ್ಳಿಯ ಜನರಲ್ಲಿ ಹುಟ್ಟಲು ಶುರುವಾಯಿತು. ಹೀಗೆ ವರುಷಗಳು ಕಳೆದವು, ಆ ಮುದುಕನಿಗೆ ಸುಮಾರು ಎಂಬತ್ತು ವರ್ಷ ವಯಸ್ಸಾದಾಗ ಒಂದು ನಂಬಲಾಗದ ವಿಷಯ ಸಂಭವಿಸಿತು. ತಕ್ಷಣವೇ ಎಲ್ಲರೂ ವದಂತಿಯನ್ನು ಕೇಳಲು ಪ್ರಾರಂಭಿಸಿದರು.

ಆ ದಿನ ಮುದುಕ ತುಂಬಾ ಸಂತೋಷವಾಗಿದ್ದ. ಅವನು ಯಾವುದರ ಬಗ್ಗೆಯೂ ದೂರನ್ನು ನೀಡುತ್ತಿರಲಿಲ್ಲ. ಅವನ ಮುಖದ ಮುಗುಳ್ನಗೆಯಿಂದ ತಾಜಾವಾಗಿತ್ತು. ಇದನ್ನು ನೋಡಿ ಹಳ್ಳಿಯ ಜನರಿಗೆಲ್ಲ ಆಶ್ಚರ್ಯವಾಗಿತ್ತು. ಇದೇನು ಪವಾಡ ನಡಿಯಿತು ಅಂತ. ಇಡೀ ಹಳ್ಳಿಯ ಜನರೆಲ್ಲ ಒಟ್ಟಾಗಿ, ಮುದುಕನಲ್ಲಿ ಕೇಳಿದರು. ಇದರ ರಹಸ್ಯವೇನು? ಏನಾಯಿತು ನಿನಗೆ ಇದ್ದಕಿದ್ದ ಹಾಗೆ? ಎಂದು.

**(ಪುಟ 15 ರಲ್ಲಿ ಮುಂದುವರೆಯುವುದು. . . .)**

# ಭಕ್ತಿ



✍ ಡಾ. ಬಿ. ಆರ್. ಮಂಜುನಾಥ್

ಭಕ್ತಿ ಮಾರ್ಗ ಇಂದು ಭಾರತದಲ್ಲಿ ಏಕೆ, ಇಡೀ ಜಗತ್ತಿನಲ್ಲಿ ಒಂದು ಮುಖ್ಯ ಮಾರ್ಗವಾಗಿದೆ. ಕೇವಲ ಹಿಂದೂ, ಕ್ರೈಸ್ತ, ಇಸ್ಲಾಂ ಅಲ್ಲದೆ, ಜೈನ ಹಾಗೂ ಬೌದ್ಧ ಧರ್ಮಗಳಲ್ಲಿಯೂ ಇದು ಹೆಚ್ಚಾಗಿದೆ. ಭಕ್ತಿ ಎಂದರೇನು? "ಭಾಗ" ಎಂಬ ಮೂಲ ಧಾತುವಿನಿಂದ ಹುಟ್ಟಿದ ಈ ಪದ "ಭಾಗತಿ" ಎಂಬ ಪಂಪ ರೂಪಾಂತರ. "ಮಾನವ" ಹಾಗೂ ಅವನನ್ನು "ಹುಟ್ಟಿಸಿದ ದೇವರು", ಇಬ್ಬರ ನಡುವಿನಲ್ಲಿ ಇರುವ ಪ್ರೀತಿಯಲ್ಲಿ ಇಬ್ಬರಿಗೂ ಸಮ-ಸಮ ಪಾಲು. ಮಾನವ-ಭಾಗವಾತ, ದೇವ-ಭಾಗವಂತ. ಇಲ್ಲಿ ಸಿಟ್ಟುಗೊಂಡು ಮಾನವನಿಗೆ ಶಿಕ್ಷೆ ಕೊಡುವ ದೇವರಿಲ್ಲ. ಇದು ಹಳೆಯ ಬೈಬಲ್ ನ ದೇವರ ರೂಪ, ಕ್ರಿಸ್ತ ಮತದಲ್ಲಿ ಇಂತಹ ಸಿಟ್ಟುಗೊಳ್ಳುವ ದೇವರಿಲ್ಲ. ಅವನು ದಯಾಲು-ದೃಪಾಲು.

ವೇದದಲ್ಲಿರುವ ದೇವತೆಗಳು ಎಲ್ಲಾ, ಮಾನವರೇ. ಅವರಿಗೆ ಮೃತ್ಯುವಿನ ಭಯವಿಲ್ಲ ಅಷ್ಟೇ. ಮಿಕ್ಕೆಲ್ಲ ಭಯವೂ ಅವರಿಗಿದೆ. ಆ ದೇವೇಂದ್ರನಿಗೆ ಮಾನವನಿಗೆ ಇರುವ ಎಲ್ಲಾ ಮಾನಸಿಕ ದೌರ್ಬಲ್ಯಗಳೂ ಇವೆ. ಅವನು ತನ್ನ ವಜ್ರಾಯುಧವನ್ನು ಎತ್ತಿಕೊಂಡು ಎಲ್ಲರನ್ನೂ ಹೆದರಿಸುವ ಒಬ್ಬ ವ್ಯಕ್ತಿ. ವೇದದಲ್ಲಿ ಅವನು ಯಾರಾದರೂ ಹೆಂಗಸರನ್ನು ಪ್ರೀತಿಸಿರಬಹುದೇ ಹೊರತು, ಮಾನವರನ್ನು ಪ್ರೀತಿಸುವ ಶಕ್ತಿ ಆಗಿರಲಿಲ್ಲ. ಕ್ರೈಸ್ತ ಧರ್ಮದಲ್ಲಿ, Father-Son-Holy Ghost ಎನ್ನುವ ತ್ರಿಮೂರ್ತಿ ತತ್ವವಿದೆ. ಇದರಲ್ಲಿ ಆ ದೇವ ತಂದೆಯಾದರೆ, ಯೇಸು ಮಗನಾಗುತ್ತಾನೆ. ಈ ತಂದೆ-ಮಕ್ಕಳ ನಡುವೆ ಇರುವ ಪ್ರೀತಿಗೆ Holy Ghost ಎನ್ನುತ್ತಾರೆ. ಆ ದೇವ ತನ್ನ ಮಗನಾದ ಯೇಸುವನ್ನಷ್ಟೇ ಪ್ರೀತಿಸುತ್ತಾನೇ ಹೊರತು, ಮಿಕ್ಕೆಲ್ಲರನ್ನೂ ಅಲ್ಲ. ಅಲ್ಲಿಯೇ ದೇವಲೋಕದಲ್ಲಿ ತನ್ನೊಡನೆಯೇ ವಿಹರಿಸುತ್ತಿದ್ದ ಗಂಧರ್ವ ಗೇಬ್ರಿಯಲ್ ನನ್ನು, ಅವನು ಮಾಡಿದ ತಪ್ಪನ್ನು ಕ್ಷಮಿಸದೆ, ನರಕಕ್ಕೆ ತಳ್ಳಿದ ಈ ದೇವ. ಅಂತೆಯೇ ತಪ್ಪು ಮಾಡಿದ ಮಿಕ್ಕೆಲ್ಲರನ್ನೂ ನರಕ ಕಲಾಪದಲ್ಲಿ ಬೆಂಕಿಯಲ್ಲಿ ಸುಡುವ ದೇವನಿವ.

ಕೇವಲ ಈ ಇಂದ್ರ-ಉಪೇಂದ್ರ, ವರುಣ-ವಾಯು ದೇವತೆಗಳನ್ನು ಸಂಪ್ರೀತಗೊಳಿಸುವ ಕೆಲಸ, ವೈದಿಕ ಧರ್ಮದ್ದು. ಇದರಲ್ಲಿ 'ಅಯ್ಯೋ ದೇವತೆಗಳೇ, ನನ್ನನ್ನು ನರಕ ಕೂಪಕ್ಕೆ ತಳ್ಳಬೇಡಿ," ಎಂಬ ಹೆದರಿಕೆ ಮಾತ್ರ ಇದೆ. ಪ್ರೀತಿಗೆ ಎಡೆ ಇಲ್ಲ ಈ ವೈದಿಕ ಧರ್ಮದಲ್ಲಿ ಕೇವಲ ಮೇಲಿನ ಮೂರು ಜಾತಿಗಳಿಗೆ ಮಾತ್ರ ಎಡೆ ಇದೆ. ಶೂದ್ರರಿಗೆ ಎಡೆ ಇಲ್ಲ. ಹಾಗಾದರೆ ಈ ಶೂದ್ರರು ಏನು ಮಾಡಬೇಕು? ಯಾವ ದೇವರನ್ನು ಪೂಜಿಸಬೇಕು? ಮೊದಲಿನಿಂದಲೂ, ದಕ್ಷಿಣದಲ್ಲಿ 'ತಾಯಿಪೂಜೆ' ನಡೆದಿದೆ. ಈ ನೆಲವೇ ನಮ್ಮ ತಾಯಿ, ನಮ್ಮನ್ನು ಹುಟ್ಟಿಸಿ, ಉಣಿಸಿ, ತೂಗಿಸಿ ಪೊರೆಯುವವಳು. ನಾವು ಕಡೆಗೆ ತೀರಿಕೊಂಡಾಗ, ಅವಳ ಮಡಿಲಿಗೆ ನಾವು ಮತ್ತೆ ಮರಳುತ್ತೇವೆ ಎನ್ನುವುದು ಈ ದ್ರಾವಿಡ ಪದ್ಧತಿ.

ದಕ್ಷಿಣದಲ್ಲಿ ಆಳ್ವಾರ್, ಹಾಗೂ ನಯನಾರ್ ಜಾತಿಗಳು ಈ ವೈದಿಕ ಧರ್ಮದಿಂದ ಹೊರಗಾದವರು. ಅವರು ಆ ದೇವನಿಗೆ ಕೂಡಿಸಿಕೊಳ್ಳುವ ಬಗೆಯನ್ನು ಈ ತಾಯಿ ದೇವತೆಯ ರೂಪದಲ್ಲಿ ಕಂಡುಕೊಂಡರು. ತಮ್ಮನ್ನು ಯಾವಾಗಲೂ ಪ್ರೀತಿಸುವ 'ವಿಷ್ಣು', 'ಶಿವ'ನ ರೂಪವನ್ನು ಕಟ್ಟಿಕೊಂಡರು. ಈ ದಯಾಸಾಗರ ಒಲಿದವರನ್ನುಒಲಿದು, ಸಲಹುವವನು ಎಂಬ ಧರ್ಮವನ್ನು ಕಟ್ಟಿಕೊಂಡರು. ಇದೇ "ಭಕ್ತಿ" ಮಾರ್ಗದ ಬೀಜವಾಯಿತು.

ರಾಮಾನುಜಾಚಾರ್ಯರು ಮೊದಲು ಅದ್ವೈತದ ಉಪದೇಶ ಪಡೆದರೂ ಕೂಡ, ಅವರ ಮನಸ್ಸಿನಲ್ಲಿ, "ಎಲ್ಲವೂ ನಾನೇ ಆದಾಗ, ಮಾಯೆ ನನಗೇ ಹೇಗೆ ಕವಿಯಬಹುದು" ಎಂಬ ಶಂಕೆ ಹುಟ್ಟಿ, "ಅಲ್ಲ ದೇವ ಅನ್ನುವುದು ಒಂದು ಪರಮಶಕ್ತಿ, ನಾವೆಲ್ಲರೂ ಅದಕ್ಕೆ ಅಧೀನರಾದವರು" ಎಂಬ ತೀರ್ಮಾನಕ್ಕೆ ಬಂದರು. ಅಂತೆಯೇ ಶಿವಶರಣರೂ, ಶಿವನೇ ಎಲ್ಲಾ ಪರಮ ಶಕ್ತಿ" ಎಂಬ ತೀರ್ಮಾನಕ್ಕೆ ಬಂದರು. ವೈಷ್ಣವರಾಗಲಿ, ಶೈವರಾಗಲಿ ಇಬ್ಬರೂ ದ್ವೈತಿಗಳು. ಇಬ್ಬರೂ ಆ ದೇವನಿಗೆ ಶರಣಾದ ಜೀವಗಳು.

ಹೀಗೆ ಹಿಂದುಳಿದ ಜನಾಂಗ "ತಮ್ಮನ್ನು ಪ್ರೀತಿಸುವ ದೇವರನ್ನು" ಮಾಡಿಕೊಂಡು ನಲಿಯಿತು. "ಗೀತೆ" ಉಪನಿಷತ್ತುಗಳ ಸಾರ. ಅದರಲ್ಲಿ "ಕರ್ಮ ಮಾರ್ಗ", "ಭಕ್ತಿ ಮಾರ್ಗ", "ಜ್ಞಾನಮಾರ್ಗ" ಎಂಬ ಮೂರು ದಾರಿಗಳನ್ನು ಸಾರಲಾಗಿದೆ.

ನೀನು ಒಪ್ಪಿಕೊಂಡ ಕರ್ಮಗಳನ್ನು ನೀನು ಮಾಡುವುದೇ ನಿನ್ನ ಮುಕ್ತಿ ಮಾರ್ಗ ಎನ್ನುವುದೇ ಕರ್ಮಮಾರ್ಗ ಇದರಲ್ಲಿ ಎಲ್ಲರಿಗೂ ಅವಕಾಶವಿದೆ. ನಾನು ಬ್ರಾಹ್ಮಣನಾಗಿ ದಿನವೂ ವಿದ್ಯಾರ್ಜನೆ ಮಾಡಿ, ಎಲ್ಲರಿಗೂ ಆ ವಿದ್ಯೆಯನ್ನು ಹಂಚುತ್ತೇನೆ ಎನ್ನುವುದು ಅವನ ದಾರಿಯಾದರೆ, ನಾನು ಉಳುವವನು, ಭೂಮಿಯಲ್ಲಿ ಉತ್ತು-ಬಿತ್ತಿ, ತಿನಿಸನ್ನು ಎಲ್ಲರಿಗೂ ಹಂಚುತ್ತೇನೆ ಎನ್ನುವುದು ಅವನ ದಾರಿ. ಭಕ್ತಿ ಮಾರ್ಗದಲ್ಲಿ ದೇವರಿಗೆ, ಯಾವ ಪ್ರಶ್ನೆಯನ್ನೂ ಕೇಳದೆ, ಅವನನ್ನು ಅರಿಯುವ ಗೋಜಿಗೂ ಹೋಗದೆ, ಬೆಕ್ಕಿನ ಮರಿ ತಾಯಿಬೆಕ್ಕನ್ನು ಅಪ್ಪಿಕೊಂಡು ಮುಂದೆ ಹೋಗುವ ಮಾದರಿಯಲ್ಲಿ ಹೋಗುವುದೇ ಭಕ್ತಿಮಾರ್ಗ. ಇದರಲ್ಲಿ ದೇವರಲ್ಲಿ ಅಚಲವಾದ ನಂಬಿಕೆಯೇ ಮುಖ್ಯ. "ಕಲ್ಲಿನಲ್ಲಿರುವ ಕ್ರಿಮಿಕೀಟಗಳಿಗೆ, ಬೆಟ್ಟದ ಮೇಲಿರುವ ಮರಗಳಿಗೆ ಆಹಾರವಿತ್ತು, ನೀರೆಯುವವರಾರೋ" ಎಂಬ ನೆಚ್ಚಿಕೆಯೇ ಇದರ ಬೇರು.

"ಜ್ಞಾನಮಾರ್ಗ" ನನ್ನ ಸುತ್ತಮುತ್ತ ನಡೆಯುತ್ತಿರುವುದೇನು? ಅದನ್ನು ಯಾರಾದರೂ ನಿಯಂತ್ರಿಸುತ್ತಿದ್ದಾರೆಯೇ? ಅದು ಎತ್ತ ಹೋಗುತ್ತಿದೆ? ನಾನು ಯಾರು? ಎನ್ನುವ ಪ್ರಶ್ನೆಗಳನ್ನು ಹಾಕಿಕೊಂಡು ಅದರ ಉತ್ತರಗಳನ್ನು ಹುಡುಕಿ ನಡೆಯುತ್ತದೆ. ಈ ಜ್ಞಾನಮಾರ್ಗವೇ ಶ್ರೇಷ್ಠ ಎಂದು ಗೀತೆ ಸಾರುತ್ತದೆ. ಚಿಂತನೆಯೇ ಇಲ್ಲದೆ ನಡೆದರೆ ಅದು ಕುರಿ ಹೋಗುವ ದಾರಿ. ಅದೂ ತನ್ನ ಕರ್ಮವನ್ನು ಮಾಡುತ್ತದೆ. ಕುರಿ ಕಾಯುವವನನ್ನು ಶ್ರದ್ಧೆಯಿಂದ ಹಿಂಬಾಲಿಸುತ್ತದೆ. ಆದರೆ ಅದಕ್ಕೆ ಯಾವ ಚಿಂತನೆಯೂ ಇಲ್ಲ. ಇದು ದ್ವೈತ ಮಾರ್ಗ ಭಕ್ತಿ ಮಾರ್ಗ.

ಅದ್ವೈತ ಮಾರ್ಗಕ್ಕೂ – ವಿಜ್ಞಾನ ಮಾರ್ಗಕ್ಕೂ ಏನೂ ಅಂತರವಿಲ್ಲ. ಎಲ್ಲದನ್ನೂ ಪ್ರಶ್ನಿಸುವ ಉತ್ತರ ಹುಡುಕುವ ಕೆಲಸ ವಿಜ್ಞಾನದ್ದು. ಅದೇ ಅದ್ವೈತ ಮಾರ್ಗ. "ಹೌದು, ಆದರೆ, ಅದ್ವೈತದಲ್ಲಿ ಎಲ್ಲವೂ ನಾನೇ, ಎಂದಾಗ ಮಾಯೆ ಎಂದರೇನು ಎಂದು ರಾಮಾನುಜರನ್ನು ಕಾಡಿದ ಪ್ರಶ್ನೆ ಇಂದಿಗೂ ನಿಲ್ಲುತ್ತದೆ. ಗೌಡ ಪಾದಾಚಾರ್ಯರ "ಮಾಂಡೂಕನ ಕಾರಿಕ"ದಲ್ಲಿ "ಮಾಯೆ" ಎಂಬ ಪದವನ್ನು ಬಳಸುತ್ತಾರೆ. ಆದಿಶಂಕರರು ಆ ಪದವನ್ನು ಬಳಸುವುದಿಲ್ಲ. ಅವರು "ಅಧ್ಯಾಸ" ಎಂಬ ಪದವನ್ನು ಬಳಸುತ್ತಾರೆ. ಅಧ್ಯಾಸವನ್ನು "ತಪ್ಪು ಗುರುತು" ಎಂದರ್ಥ. ಹಗ್ಗವನ್ನು ನೋಡಿ ಹಾವೆಂದು ತಿಳಿಯುವುದು. ಆದರೆ "ನಾನೇ ನಾನಾಗಿರುವಾಗ" ನನ್ನ ಬುದ್ಧಿಗೆ "ಅಧ್ಯಾಸ" ವೆಲ್ಲಿ ಬಂತು?

ನಮ್ಮ ಉಪನಿಷತ್ತು, ವೇದಾಂತಗಳಲ್ಲಿ "ಬುದ್ಧಿ" ಬೇರೆ, "ಚಿತ್ತ" ಬೇರೆ ಎಂದು ನಿಚ್ಚಳ ಮಾಡುತ್ತಾರೆ. ಬುದ್ಧಿ, ಇಂದ್ರಿಯಗಳ ಅಧೀನವಾಗಿರುತ್ತದೆ. ಈ ಚಂಚಲ ಇಂದ್ರಿಯಗಳರಿಗೆ ನಮ್ಮ ಸುತ್ತ ಮುತ್ತಿನ ಜಗತ್ತಿನಲ್ಲಿರುವ ವಸ್ತುಗಳನ್ನು ಸರಿಯಾಗಿ ತಿಳಿಯುವ ಶಕ್ತಿ ಇಲ್ಲ. ನಾವು ಸುತ್ತಲೂ ಏನೂ ಸದ್ದಿಲ್ಲದೆ ಶಾಂತವಾಗಿದೆ ಎಂದು ತಿಳಿದರೆ ಅದು ಕೇವಲ 5 $KH_2$- 20 $KH_2$ ವರೆಗೆ ಏನೂ ಸದ್ದಿಲ್ಲ ಎಂದಷ್ಟೇ ಅರ್ಥ, ultrasonics ನಲ್ಲಿ, ಮತ್ತು ಇತರ ಸದ್ದುಗಳಲ್ಲಿ ಅತೀ ಗಲಭೆಯಾಗುತ್ತಿದ್ದು, ಅದು ಇಲಿಗಳು, ಜಿರಳೆಗಳಿಗೆ ಮಾತ್ರ ಕೇಳುತ್ತಿರುತ್ತದೆ. ಆದ್ದರಿಂದ ಶಕ್ತಿ ಚೈತನ್ಯ ಎಲ್ಲೆಲ್ಲಿಯೂ ತಾನೇ ತುಂಬಿದೆ. ನಾವೂ ಅದೇ ಚೈತ್ರನ್ಯ ಆಗಿದ್ದೇವೆ. ಗೀತೆಯಲ್ಲಿ "ವಿರಾಟ ಸ್ವರೂಪ" ಎನ್ನುವುದು ಇದನ್ನೇ. ಯಾವುದೂ ಬೇರೆ ಇಲ್ಲ. ಅದೇ ಚೈತನ್ಯ ನಮ್ಮ ಇಂದ್ರಿಯಗಳಿಗೆ ಬೇರೆ ಬೇರೆಯಾಗಿ ಪ್ರಕಟವಾಗುತ್ತದೆ. ಇದರಿಂದ ನಮ್ಮ ತಿಳುವಳಿಕೆಯನ್ನು ಇಂದ್ರಿಯಗಳ ಹತೋಟಿಯಿಂದ ತಪ್ಪಿಸಿಕೊಳ್ಳುವುದೇ ಯೋಗದ ಗುರಿ. ಇಂದ್ರಿಯಗಳನ್ನು ಮಟ್ಟ ಹಾಕಿದಾಗ ಅದು "ಸಮಾ-ಧೀ"ಯಾಗುತ್ತದೆ. ಒಂದು ಬಾರಿ ಆ ಇಂದ್ರಿಯಗಳಿಂದ ತಪ್ಪಿಸಿಕೊಂಡರೆ ಆಗ ನಮ್ಮ 'ಧೀ' ಪ್ರಯಾಣ ಮಾಡಲು ಮೊದಲು ಮಾಡುತ್ತದೆ. ಇದೇ 'ಧೀ-ಯಾನ'.

ಹಾಗಿದ್ದರೆ 'ಭಕ್ತಿ' ಮಾರ್ಗದ ಫಲವೇನು? ಭಕ್ತಿಯಲ್ಲಿ ಪ್ರೀತಿಯಿಂದ ನೆಚ್ಚಿಕೆಯಿಂದ ಮನಸ್ಸಿಗೆ ಶಾಂತಿ ಸಿಕ್ಕು, ಆಸೆಯಿಂದ ಇಂದ್ರಿಯಗಳ ಹತೋಟಿ ಕಡಿಮೆಯಾಗುತ್ತದೆ. ಆಗ 'ಧೀ-ಯಾನ' ಮಾಡಲು ಸುಲಭವಾಗುತ್ತದೆ.

ಧೀಯಾನ ಮಾಡಿದಾಗ ಜಗತ್ತಿನಲ್ಲಿ ಇರುವುದೆಲ್ಲಾ ಒಂದೇ ಎಂದು ಅರಿವಾಗುತ್ತದೆ. "ಬೇಕು" ಎಂದನಿಸುವುದು, ನಮ್ಮಿಂದ ಬೇರೆಯಾದ ವಸ್ತುಗಳಿಂದಲೇ. ಯಾವುದೂ ಬೇರೆ ಅಲ್ಲ ಎಂದೆಣಿಸಿದಾಗ, ಎಲ್ಲವೂ ನನ್ನಲ್ಲಿಯೇ ಇದೆ, ಎಂಬ ಅರಿವಾಗುತ್ತದೆ. ಅದಾದಾಗ, "ಕಾಮ ದಹನ"ವಾಗುತ್ತದೆ. ಕಾಮದ ಹಿಂದೆ ಮಿಕ್ಕ ಐದು ಒಳಗಿನ ಹಗೆಗಳೂ ಬೆಂದು ಹೋಗುತ್ತವೆ. ಸಂಕಲ್ಪ ಇದರ ಎದಿರಾದದ್ದು. ದೇವರಿಗೆ ನಾನ್ಯಾರೂಂತ, ಪಾಪ ಗೊತ್ತಿಲ್ಲ ನೋಡಿ, ಅದಕ್ಕೆ ನಾನು ಇಂತಹವನು, ಇಂತಹ ಗೋತ್ರದವನು. ಇಂತಹ ಫಲ ಕೇಳಲಿಕ್ಕೆ ಬಂದಿದೀನಿ ಅಂತ ನಾವು ಹೇಳ್ಕೋಬೇಕೆ.

ಭಕ್ತಿ ಮಾರ್ಗ-ಜ್ಞಾನಮಾರ್ಗವೆರಡೂ ಈ ಆಸೆಯನ್ನು ತೊಡೆದು ಹಾಕುತ್ತವೆ. "ನಾನು" ದೇವರಿಗಿಂತ "ಬೇರೆ" ಅಂತ ತಿಳಿದವನಿಗೆ ಹೆಚ್ಚು ಅಹಂಕಾರ. ಏಕೆಂದರೆ ದೇವರನ್ನು ಬಿಟ್ಟು ಬೇರೆ ತನಗೇ ಒಂದು ಗುರುತಿದೆ ಎಂದು. ಅದನ್ನು ಮೊದಲು ಬಿಡಿ. ಅದೇ ಭಕ್ತಿ ಮಾರ್ಗದ ಮೊದಲ ಮೆಟ್ಟಿಲು.

# ಪ್ರತಿಧ್ವನಿಗಳನ್ನು ಮಾರುವವನು



✍ ಉಮಾ ರಾವ್

ಬೆಳಿಗ್ಗೆ ಐದು ಗಂಟೆಗೆ ಸರಿಯಾಗಿ ನಿದ್ದೆಯ ಮಂಪರಿನಿಂದ ಹೊಡೆದೆಬ್ಬಿಸುವ ದೂದ್ ವಾಲಾನ ಕರೆಗಂಟೆಯ ಚೀರಾಟಕ್ಕೆ ಎದ್ದು, ಪಕ್ಕದ ಸಿಂಧಿಗಳ ಫ್ಲಾಟ್ ನಿಂದ ಅರಚುವ ವಿವಿಧ ಭಾರತೀಯ ಹಿನ್ನೆಲೆ ಸಂಗೀತದೊಡನೆ ಸ್ನಾನ, ಬ್ರೇಕ್ ಫಾಸ್ಟ್ ಮುಗಿಸಿ, ಆಮೇಲೆ ನೂರಾರು ಉತ್ಸಾಹವಿಲ್ಲದ 6 ಗಂಟೆಯ ಮುಖಗಳೊಡನೆ ಒಂದಾಗಿ ನುಗ್ಗಾಡಿ ಕೆಂಪು ಬಸ್ಸು ಹತ್ತಿ ಆಫೀಸು ಸೇರಿ, ಸಂಜೆ ಆರರವರೆಗೂ ಫೈಲುಗಳ ರಾಶಿಯೊಡನೆ ಜಂಜಾಟ ನಡೆಸಿ, ವಾಪಸ್ಸು ಬರುತ್ತಾ ದಾರಿಯಲ್ಲೇ ನಾಯಕ್ಸ್ ಹೋಟೆಲಿನ ಐದು ವಾಟಿಯ ರುಚಿಯಲ್ಲಿ ಯಾವ ವೈವಿಧ್ಯವೂ ಇಲ್ಲದ ಒಂದು ಥಾಲಿ ಊಟ ಮಾಡಿ, ನಾನು ಇದುವರೆಗೂ ಮನೆಯೆಂದು ಕರೆದ ಒಂದು ರೂಮಿನ ಗೂಡು ಸೇರಿ, ರಾತ್ರಿ ಹತ್ತಕ್ಕೆ ದಣಿದು ಹಾಸಿಗೆ ಸೇರುತ್ತಾ ದಿನಗಳನ್ನು ಕೊಲ್ಲುವ, ಮುಂಬೈಯ ಯಾಂತ್ರಿಕ ಜೀವನದ ಜಡತೆಯನ್ನು ಕೊಡವಿ, ಹೊಸ ಮನುಷ್ಯನಾಗಿ ಹಿಂದಿರುಗುವ ಆಸೆಯಿಂದ ಈ ಗಿರಿಧಾಮಕ್ಕೆ ಬರುತ್ತೇನೆ. ಇಲ್ಲಿಯ ದಟ್ಟವಾದ ಕಾಡುಗಳು, ಧಡಗುಟ್ಟಿಸುವ ಪ್ರಪಾತಗಳು, ಸುತ್ತುವರಿದ ಸುಂದರ ಕಣಿವೆ ಮಾಥೇರಾನ್ ನ ಸಹ್ಯಾದ್ರಿಯ ಶ್ರೇಣಿಗಳು. ಶುಭ್ರ ವಾತಾವರಣ ನನ್ನಲ್ಲಿ ಮತ್ತೆ ಉಲ್ಲಾಸ ತುಂಬಬಹುದೆಂಬ ಕನಸನ್ನು ಹೊತ್ತು.

ಇಲ್ಲಿಗೆ ನಮ್ಮನ್ನು ಹೊತ್ತು ತಂದ "ಬೆಂಕಿಪೊಟ್ಟಣದ ರೈಲಿ"ನಿಂದ ಇಳಿದು ರೇಲ್ವೇ ಸ್ಟೇಷನ್ ನಿಂದ ಹೊರಗೆ ಬರುತ್ತಿದ್ದಂತೆಯೇ, ಕುದುರೆಗಳು, ರಿಕ್ಷಾಗಳು ಕೈಯಲ್ಲಿ ಬೆತ್ತಗಳನ್ನು ಹಿಡಿದು ಬಣ್ಣ ಬಣ್ಣದ ಟೋಪಿಗಳೊಂದಿಗೆ ನಗು ನಗುತ್ತಾ ಓಡಾಡುತ್ತಿರುವ ಯಾತ್ರಿಕರ ಗುಂಪುಗಳು ಎದುರಾಗುತ್ತವೆ. "ಯಾವ ಹೋಟೆಲ್ ಸಾಬ್? ರಿಕ್ಷಾ ಬೇಕೇ?" ಎಂದು ಮುತ್ತಿಕೊಳ್ಳುವ ರಿಕ್ಷಾ ಹುಡುಗರನ್ನು ಪಕ್ಕಕ್ಕೆ ಸರಿಸಿ, ರಸ್ತೆಯ ಎರಡೂ ಕಡೆಯಲ್ಲಿ ಸಾಲುಗಟ್ಟಿದ್ದ ಅಲ್ಲಿನ ಪ್ರಖ್ಯಾತ ಚಿಕ್ಕಿ ಮಾರುವ ಸಿಹಿಯಂಗಡಿಗಳು, ಚಪ್ಪಲಿ ಅಂಗಡಿಗಳು, ಪ್ರತಿವರ್ಷದ 250 ಇಂಚು ಮಳೆಗೆ ಸಿಕ್ಕು ಜರ್ಜರಿತವಾದ ಆಸ್ ಬೆಸ್ ಟಾಸ್ ಛಾವಣಿಗಳುಳ್ಳ ಹೋಟೆಲ್ ಕಟ್ಟಡಗಳು ಇವೆಲ್ಲಾ ಇರುವ ಮಾರ್ಕೆಟ್ ರಸ್ತೆಯ ಮೂಲಕ ನಡೆದೇ, ತಿಂಗಳುಗಳ ಹಿಂದೆಯೇ ರಿಸರ್ವ್ ಮಾಡಿಸಿದ್ದ ಹೋಟೆಲ್ ತಲುಪುತ್ತೇನೆ.

ಊಟ ಮಾಡಿ, ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು, ಇಲ್ಲಿ ಒಂದು ಗಳಿಗೆಯನ್ನೂ ಸೋಮಾರಿತನದಲ್ಲಿ ಹಾಳು ಮಾಡುವ ಮನಸ್ಸಿಲ್ಲದೆ, ಆ ಸಂಜೆಯೇ ಉತ್ಸಾಹದಿಂದ ತಿರುಗಾಡಲು ಹೊರಡುತ್ತೇನೆ. ಬರಿಯ ಹೋಟೆಲುಗಳಿಂದ ತುಂಬಿ ಹೋದ ಊರನ್ನು ಕೆಲವೇ ನಿಮಿಷಗಳಲ್ಲಿ ದೂರ ಮಾಡಿ ಸಾಗುತ್ತೇನೆ. ಸ್ವಲ್ಪ ದೂರ ನಡೆದ ನಂತರ ಕಂಡ ಇಕೋ ಪಾಯಿಂಟ್ ಎಂಬ ಕೈ ಮರದತ್ತ ದೃಷ್ಟಿ ಹರಿದಂತೆ, ಟೂರಿಸ್ಟ್ ಗೈಡಿನಲ್ಲಿ ಇದು ಇಲ್ಲಿ ನೋಡಲೇಬೇಕಾದ ಸ್ಥಳಗಳಲ್ಲಿ ಒಂದು ಎಂದು ಓದಿದ ನೆನಪಾಗಿ, ಆ ದಿಕ್ಕಿನಲ್ಲೇ ಹೆಜ್ಜೆ ಹಾಕುತ್ತೇನೆ.

ದಟ್ಟವಾದ ಮರಗಳನ್ನು ಸೀಳಿ, ಅವುಗಳಿಂದ ಕವಿದ ಮಬ್ಬಿನ ಮಧ್ಯೆ ಮೂಡಿರುವ, ನೀಳ ಕೆಂಪು ದಾರಿಯಲ್ಲಿ ನಿಧಾನವಾಗಿ ನಡೆಯುತ್ತೇನೆ. ಮೆಲ್ಲನೆ ಚಿಲಿಪಿಲಿಗುಟ್ಟುತ್ತಿದ್ದ ಹಕ್ಕಿಗಳು, ಗಾಳಿಗೆ ತೂಗಿ ಶಬ್ದ ಮಾಡುವ ಮರದೆಲೆಗಳು ಈ ಸ್ತಬ್ಧ ವಾತಾವರಣದ ಸೊಬಗನ್ನು ಹೆಚ್ಚಿಸುತ್ತವೆ. ಮರಗಳಿಂದ ಸುತ್ತುವರಿಯಲ್ಪಟ್ಟು ನಾನು ಮುಂದುವರಿದಂತೆ ನನ್ನ ಮೇಲೆ ಒಂದು ಜಾಲ ಹಾಕಿ, ಬೇರೆ ಪ್ರಪಂಚಕ್ಕೇ ಕರೆದೊಯ್ಯುತ್ತದೆ.

ನೂರಾರು ವರ್ಷಗಳ ಹಿಂದೆ, ಶಿವಾಜಿಗೆ ಅವಿತುಕೊಳ್ಳಲು ಆಸರೆಕೊಡುತ್ತಿದ್ದ ಆ ಪರ್ವತ ಶ್ರೇಣಿಯ ಅನೇಕ ಬೆಟ್ಟಗಳಲ್ಲಿ ಒಂದಾದ ಮರಗಳ ಛಾವಣಿ ಹೊದ್ದ ಮಾಥೇರಾನ್, ನಮಗೆ ಕಳೆದು ಹೋಗಿ, ಕೇವಲ 130 ವರ್ಷಗಳ ಹಿಂದೆ, ಅದು ಒಬ್ಬ ಆಂಗ್ಲ ಅಧಿಕಾರಿಯ ಕಣ್ಣಿಗೆ ಅಕಸ್ಮಾತ್ ಬಿದ್ದು, ಜೀವ ತಳೆಯಿತೆಂದರೆ ನಂಬುವುದೇ ಕಷ್ಟವಾಗುತ್ತದೆ. ಆಗ ಮನ ತುಂಬಿ, ಅಷ್ಟು ವರ್ಷಗಳ ಹಿಂದೆ, ಚಿರತೆಗಳಿಂದ ತುಂಬಿ ಹೋದ ದಟ್ಟವಾದ ಕಾಡುಗಳುಳ್ಳ ಆ ಬೆಟ್ಟವನ್ನು "ಒಂಟಿ ಮರದ ಗುಡ್ಡ"ದ ಕಡಿದಾದ ದಾರಿಯ ಮೂಲಕ ಮೊದಲ ಬಾರಿ ತಲುಪಿದ ಪ್ರಕೃತಿಯ ಉಪಾಸಕ ಆಂಗ್ಲ ಅಧಿಕಾರಿ ಮ್ಯಾಲೆ ಅವರನ್ನು ಸ್ಮರಿಸುತ್ತೇನೆ. ಹಾಗೇ ನಾನು ಮುಂದೆ ನಡೆದಂತೆ, ಆಜಾನುಬಾಹು, ಬಿಳಿಯ ಚರ್ಮದ ಮ್ಯಾಲೆ ನನ್ನ ಮನಸ್ಸಿನಲ್ಲಿ ರೂಪುಗೊಂಡು, ಜೀವತಾಳಿ, ಖಾಕಿ-ಚಡ್ಡಿ-ಶರಟು, ಹ್ಯಾಟು, ಬೂಟುಗಳು, ಹೆಗಲಿನಿಂದ ತೂಗುತ್ತಿದ್ದ ಬಂದೂಕು, ಕೈಯಲ್ಲೊಂದು ಉದ್ದನೆಯ ಕೋಲಿನೊಂದಿಗೆ ಮುಳ್ಳುಗಿಡಗಳನ್ನು ತಳ್ಳುತ್ತಾ, ದಾರಿ ಮಾಡಿಕೊಳ್ಳುತ್ತಾ ನಡೆಯತೊಡಗುತ್ತಾನೆ. ಇಲ್ಲಿ ತುಂಬಿ ಹೋಗಿರುವ ಹಾವುಗಳಿಗೆ ಸ್ವಲ್ಪವೂ ಅಂಜದೆ, ಮೈಯೆಲ್ಲಾ ಕಣ್ಣಾಗಿ ಆ ಸೌಂದರ್ಯವನ್ನು ಹೀರುತ್ತಾ, ಅವನು ಮುಂದುವರಿದಂತೆ, ಇದನ್ನು ಜನಗಳಿಗೆ ಹೇಗೆ ತಲುಪುವ ಹಾಗೆ ಮಾಡಬಹುದೆಂದು ಲೆಕ್ಕ ಹಾಕುತ್ತಾ, ಎಲ್ಲಿ ಕಾಲುದಾರಿಗಳನ್ನು ಮಾಡಬೇಕೆಂದು ತನ್ನ ಜೇಬಿಬಲ್ಲಿದ್ದ ಪುಟ್ಟ ಪ್ಯಾಕೆಟ್ ಡೈರಿಯಲ್ಲಿ ಗುರುತು ಮಾಡಿಕೊಳ್ಳುತ್ತಾನೆ. ಆ ಕ್ಷಣದಲ್ಲಿ ನನ್ನ ಮ್ಯಾಲೆಯ ಮಧ್ಯದ ಒಂದು ಶತಮಾನ ಕರಗಿ ಹೋಗಿ, ಅವನು ನನಗಿಂತ ಕೆಲವೇ ಹೆಜ್ಜೆಗಳು ಮುಂದೆ ಸಾಗುತ್ತಿರುತ್ತಾನೆ... ತನಗೆ ದಾರಿ ತೋರಿಸಲು ಜೊತೆಗೆ ಬಂದಿರುವ, ಎಷ್ಟೋ

ವರ್ಷಗಳಿಂದ ಆ ಕಾಡುಗಳಲ್ಲಿ ನೆಲೆಸಿರುವ ಅರೆ ನಗ್ನ ಆದಿವಾಸಿಗಳ ಸಹಿತ. ಅದೇ ಗುಂಗಿನಲ್ಲೇ ನಾವು ಮುನ್ನಡೆದಂತೆ, ಇದಕ್ಕಿದ್ದಂತೆ ಹತ್ತಿರವಾದ ಗೊರಸುಗಳ ಸಪ್ಪಳ ನನ್ನನ್ನು ಬೆಚ್ಚಿ ಬೀಳುವಂತೆ ಮಾಡುತ್ತದೆ. ಜೊತೆಗೇ ತೂಗಿ ಬಂದ "ಬಾತ್ ಬನ್ ಜಾಯೇ. . . " ಹಾಡು ಹತ್ತಿರ ಬಂದಂತೆ ಕಿವಿಯ ಮೇಲೆ ರಾಚುತ್ತದೆ.

ಆಗ ಕುದುರೆಗಳ ಮೇಲೆ ವೇಗವಾಗಿ ಬಂದ ಉದ್ದ ಕೂದಲಿನ ಎಂಟು ಹತ್ತು ಗುಜರಾತಿ ಹುಡುಗರು ಹೆಗಲ ಮೇಲಿಂದ ತೂಗಿ ಬಿದ್ದ "ಟೂ-ಇನ್ ಒನ್"ನ ಸಂಗೀತದಲ್ಲಿ ಮೈಮರೆತು ತಾವೂ ಜೊತೆಗೆ ಜೋರಾಗಿ ಹಾಡುತ್ತಾ ಧೂಳೆಬ್ಬಿಸುತ್ತಾ ಹತ್ತಿರವಾಗುತ್ತಾರೆ. ಅವರಿಗೆ ಜಾಗ ಕೊಡಲು ಪಕ್ಕಕ್ಕೆ ಸರಿದು ನಿಂತು ಕಣ್ಣಲ್ಲಿ ಬಿದ್ದ ಮಣ್ಣೊರೆಸಿಕೊಂಡಂತೆ ಅವರು ಹಿಂದಿರುಗಿ ನನ್ನತ್ತ ನೋಡಿ ಒಂದುರೀತಿಯ ಗೆಲುವಿನ ನಗೆ ನಕ್ಕು "ಚಲ್, ಬೇಟಿ ಚಲ್" ಎನ್ನುತ್ತಾ ತಮ್ಮ ಕುದುರೆಗಳ ಬೆನ್ನುಚಪ್ಪರಿಸುತ್ತಾರೆ.

ಆ ಕ್ಷಣದಲ್ಲಿ ಮ್ಯಾಲೇ ಅಲ್ಲಿಂದ ಮಾಯವಾಗಿ 20ನೇ ಶತಮಾನದ ಅಸಭ್ಯತೆ ನನ್ನ ಮುಂದೆ ಬೆತ್ತಲೆಯಾಗಿ ನಿಲ್ಲುತ್ತದೆ. ಅದರೆ ಅವರು ಸ್ವಲ್ಪ ದೂರ ಹೋಗುತ್ತಲೇ, ಆ ಕಾಡು ತನ್ನ ದೊಡ್ಡತನದಿಂದಲೋ ಎಂಬಂತೆ ಆ ಶಬ್ದವನ್ನೆಲ್ಲಾ ಹೀರಿಕೊಂಡು ಮತ್ತೆ ಶಾಂತಿಯ ಮುಸುಕನ್ನು ಹೊದಿಸುತ್ತದೆ. ಹಾಗೇ ನಾನು ನಡೆದಂತೆ, ಆಧುನಿಕ ಡ್ರಾಯಿಂಗ್ ರೂಮುಗಳ ಅಲಂಕಾರಕ್ಕಾಗಿ ಮಾರುವ, ಅಲ್ಲಿ ಬೆಳೆಯುವ ಮೋಹಕ ಒಣಗಿದ ಗಿಡ-ಗರಿಕೆಗಳ ಗೊಂಚಲುಗಳನ್ನು ಹೊತ್ತ, ರಂಗು ರಂಗಿನ ರವಿಕೆ, ಬೆಳ್ಳಿಯ ಒಡವೆಗಳನ್ನು ತೊಟ್ಟ, ಮಾತಿಲ್ಲದೆ ಸಾಗುವ ಆದಿವಾಸಿ ಹೆಂಗಸರು ಎದುರಾಗುತ್ತಾರೆ. ನಾನು ಮತ್ತೆ ಪ್ರಕೃತಿಯಲ್ಲಿ ಲೀನವಾಗಿ ಕಾಲು ಹಾಕಿದಂತೆ, ನನಗೆ ಅರಿವಿಲ್ಲದೆಯೇ ಕಿಲೋ ಮೀಟರುಗಳು ಉರುಳುತ್ತವೆ.

ಇದ್ದಕ್ಕಿದ್ದಂತೆ ಎದುರಿಗೆ ಕಂಡ ಶುಭ್ರ ನೀಲ ಆಕಾಶವನ್ನು ನೋಡಿ ನಾನು ಬೆಚ್ಚಿ ಬೀಳುತ್ತೇನೆ. ನಾನು ಮುಂದೆ ಹೋದಂತೆ, ಮರಗಳ ತೆರೆ ನಿಧಾನವಾಗಿ ಸರಿದು, ತ್ರಿಕೋಣಾಕಾರದ ಕೇಂದ್ರ ಬಂಜರು ಭೂಮಿ ಕಾಣಬರುತ್ತದೆ. ನಿಧಾನವಾಗಿ ನಡೆದು, ಆ ಕಡಿದಾದ ಜಾಗದ ತುದಿಯಲ್ಲಿ ನಿಂತು ನೋಡಿದಂತೆ, ಇದ್ದಕ್ಕಿದ್ದಂತೆ ಎದುರಾಗುವ ಸಾವಿರಾರು ಅಡಿಯ ಪ್ರಪಾತ ನನ್ನಲ್ಲಿ ನಡುಕ ಹುಟ್ಟಿಸಿ ಕಾಲುಗಳಲ್ಲಿ ಜೋಮು ತರಿಸುತ್ತದೆ. ಹಾಗೇ ಸುತ್ತಲೂ ದೃಷ್ಟಿ ಹಾಯಿಸಿದಾಗ, ಪಕ್ಕದಲ್ಲೇ ಇದ್ದ ಸಿಮೆಂಟಿನ ಬೆಂಚು ನನ್ನ ದಣಿದ ದೇಹಕ್ಕೆ ಆಹ್ವಾನ ಕೊಡುತ್ತದೆ. ನಾನು ಅದರ ಮೇಲೆ ಧೊಪ್ಪನೆ ಕುಕ್ಕರಿಸಿ, ಬೆರಗು ಗಣ್ಣಿನಿಂದ ನೋಟ ನಿಲುಕವವರೆಗೂ ಸುತ್ತುವರಿದಿದ್ದ ಕಣಿವೆ ಆ ಶ್ರೇಣಿಯ ಬೆಟ್ಟಗಳನ್ನು ದಿಟ್ಟಿಸಿದಂತೆ ಅದ್ಭುತ ಸೌಂದರ್ಯ ನನ್ನನ್ನುಉಸಿರುಗಟ್ಟಿಸುತ್ತದೆ.

ಆಗ ಅಲ್ಲಿಂದ ಸ್ವಲ್ಪ ದೂರದಲ್ಲೇ ಕುಳಿತಿದ್ದ "ಅವನು" ಕಂಡು ಬರುತ್ತಾನೆ. ನಾನು ಅಚ್ಚರಿಯಿಂದ ಅವನತ್ತ ನೋಡುತ್ತೇನೆ. ಆದರೆ ನೇರ ದಿಗಂತದಲ್ಲಿ ಸೂರ್ಯಾಸ್ತದಲ್ಲೇ ನೋಟ ನೆಟ್ಟು ಮೈಮರೆತು ಕುಳಿತಿರುವ ಅವನಿಗೆ ನನ್ನ ಅರಿವೇ ಇದ್ದಂತೆ ಕಾಣಬರುವುದಿಲ್ಲ. ಕೊಳಕು ಪಂಚೆ, ಶರಟು, ಅಲ್ಲಲ್ಲಿ ಹರಿದ ಕಪ್ಪು ಕೋಟು, ತಲೆಯ ಮೇಲೊಂದು ಟೋಪಿ, ಹೆಗಲಿನಿಂದ ಜೋತು ಬಿದ್ದ ಒಂದು ಬಣ್ಣ ಹೋದ ತೂಗು ಚೀಲ, ಸುಮಾರು 70 ವರ್ಷ ವಯಸ್ಸಿನ ಅವನು ತನ್ನ ಸುಕ್ಕುಗಟ್ಟಿದ ದೇಹವನ್ನು ಮುದುಡಿ, ತನ್ನೆದುರಿಗೇ ದಿಟ್ಟಿಸುತ್ತಾ, ಹಕ್ಕಿಗಳ ಧ್ವನಿಗಳನ್ನು ಮೈಮರೆತು ಆಲಿಸುತ್ತಾ ಕುಳಿತಿರುತ್ತಾನೆ.

24 ಗಂಟೆಗಳೂ ಕಿವಿಗೆ ಗಂಟೆಗಳನ್ನು ಕಟ್ಟಿಕೊಂಡೇ ಬದುಕುವ ನನ್ನನ್ನು ಅವನ ತನ್ಮಯತೆ ಮುಟ್ಟುತ್ತದೆ. ಆ ಇಳಿವಯಸ್ಸಿನಲ್ಲಿ ಪ್ರಕೃತಿಯಲ್ಲಿ ಲೀನವಾಗಿ ತನ್ನ ಕೊನೆಯ ಹೃದಯ ತುಂಬಿ ಬರುತ್ತದೆ. ಆದರೆ ಜೊತೆಗೇ ನೂರಾರು ಪ್ರಶ್ನೆಗಳು ತಲೆ ಹಾಕುತ್ತವೆ.. ಇವನು ತನ್ನ ಎಲ್ಲಾ ದಿನಗಳನ್ನೂ ಹೀಗೇ ಕಳೆಯುತ್ತಾನೆಯೇ? ಅಥವಾ ಇವನೂ ಇಲ್ಲಿಯ ಅನೇಕರಂತೆ, ದಿನವೂ ಸಂಜೆ ಬೆಟ್ಟ ಇಳಿದು ಹೋಗಿ, ಕೆಳಗಡೆಯ ಕಣಿವೆಯಲ್ಲಿಚಾಕ್ ಹಳ್ಳಿಯಲ್ಲಿರುವ ತನ್ನ ಮನೆಯಲ್ಲಿ ಮಕ್ಕಳು, ಸೊಸೆಯರು, ಮೊಮ್ಮಕ್ಕಳ ತುಂಬು ಸಂಸಾರದ ಕಲಕಲ ಮಾತಿನಿಂದ ಸುತ್ತುಗಟ್ಟಲ್ಪಟ್ಟು, ನೆಮ್ಮದಿಯಿಂದ ಊಟ ಮಾಡಿ ಮಲಗುತ್ತಾನೆಯೇ? ತಾನು ಜೀವಮಾನವೆಲ್ಲಾ ಕಷ್ಟಪಟ್ಟು ದುಡಿದುಕೊಂಡ ಚೂರು ಹೊಲವನ್ನು ಮಗನಿಗೆ ಕೊಟ್ಟು, ತನ್ನ ಸ್ವಾಭಿಮಾನಕ್ಕೆ ಚೂರೂ ಕುಂದು ಬಾರದಂತೆ, ಈ ವಯಸ್ಸಿನಲ್ಲಿ ತನ್ನ ಮನಸ್ಸಿಗೆ ಬಂದಂತೆ ಕಾಲ ಕಳೆಯುತ್ತಿದ್ದಾನೆಯೇ? ಆದರೂ ಈ ರೀತಿ ಆ ಪ್ರಪಾತದ ಅಂಚಿನಲ್ಲಿ ಮೈ ಮರೆತು ಪ್ರತಿಯೊಂದು ಸೂರ್ಯಾಸ್ತವನ್ನೂ ಅನುಭವಿಸುವ ಅವನ ತನ್ಮಯತೆ, ಪ್ರಕೃತಿ ಪ್ರೇಮ, ನನ್ನನ್ನು, ಮ್ಯಾಲೇಯನ್ನು ಇಲ್ಲಿ ಬಂದ ಎಲ್ಲಾ ಯಾತ್ರಿಕರನ್ನೂ, ಆ ಕ್ಷಣದಲ್ಲಿ ಅವನಿಗಿಂತ ತುಂಬಾ ಕುಬ್ಜರನ್ನಾಗಿ ಮಾಡುತ್ತದೆ.

ಆಗ ತಟಕ್ಕನೆ ನನಗೆ ಅದೇ "ಇಕೋ ಪಾಯಿಂಟ್" ಎಂದು ನೆನಪಾಗುತ್ತದೆ. ನನ್ನ ಪ್ರತಿಧ್ವನಿಯನ್ನು ನಾನೇ ಕೇಳುವ ಕಾತರದಲ್ಲಿ, ಧಡಬಡನೆ ಆ ಬೆಂಚಿನಿಂದ ಎದ್ದು ನಿಂತು, ಆ ಬೆಟ್ಟಗಳತ್ತ ತಿರುಗಿ, "ಆಜಾ. . ." ಎಂದು ಕಿರುಚುತ್ತೇನೆ. . . ಪ್ರತಿಕ್ರಿಯೆಗಾಗಿ ಕಾಯುತ್ತೇನೆ. ಆದರೆ ಏನೂ ಕೇಳಿ ಬರದಾಗ ಮತ್ತೊಮ್ಮೆ ಕೂಗುತ್ತೇನೆ. .. ನನ್ನ ಪ್ರತಿಧ್ವನಿಯನ್ನು ಕೇಳದೆ, ನಿರಾಸೆಯಿಂದ ಮನಸ್ಸು ಮುದುಡುತ್ತದೆ. ಹಾಗಾದರೆ ಆ ಗೈಡಿನಲ್ಲಿಬರೆದದ್ದೆಲ್ಲಾ ಸುಳ್ಳೇ ಎಂದು ಒಂದು ನಿಮಿಷ ಆಶ್ಚರ್ಯವಾಗುತ್ತದೆ. ಆಗ ಹಿಂದಿನಿಂದ ಆ ಮುದುಕ ನಿಧಾನವಾಗಿ ಎದ್ದು, ನನ್ನ ಕಣ್ಣಿನಲ್ಲೇ ನೋಟ ನೆಟ್ಟು, ನನ್ನತ್ತ ನಡೆದು ಬರುತ್ತಿರುವುದು ಕಾಣಿಸುತ್ತದೆ. ಅವನು ಹತ್ತಿರ ಬಂದು ನಿಂತು, "ಹಾಗಲ್ಲ ಸಾಬ್, ನಾನು ತೋರಿಸುತ್ತೇನೆ" ಎಂದು ಹೇಳುತ್ತಾನೆ. ನಾನು ಅನುಮಾನಿಸುತ್ತಿರುವುದನ್ನು ನೋಡಿ ಕಿರುನಗೆ ನಕ್ಕು "ನೀವು ನನಗೆ ದುಡ್ಡೇನು

ಕೊಡಬೇಕಾಗಿಲ್ಲ.... ನಾನು ತೋರಿಸುತ್ತೇನೆ.. . . " ಎನ್ನುತ್ತಾರೆ. ನನ್ನ ಮುಖದ ಮೇಲೆ ಹೊಡೆದಂತಾಗಿ "ಇಲ್ಲ, ಇಲ್ಲ ನಾನೇ ಪ್ರಯತ್ನ ಮಾಡುತ್ತೇನೆ ಎಂದರೂ ಕೇಳದೆ, ದೃಢವಾಗಿ, "ಸ್ವಲ್ಪ ಇರಿ ಸಾಬ್.... ಇಲ್ಲಿ ನೋಡೀ. .. " ಎನ್ನುತ್ತಾ ಹೋಗಿ, ನೆಟ್ಟಗೆ ಬೆಟ್ಟಗಳ ಎದುರಿಗೆ, ಎದೆ ಚಾಚಿ ನಿಲ್ಲುತ್ತಾನೆ. ಅವನನ್ನು ಪ್ರತಿಭಟಿಸಲಾರದೆ, ಮೆಲ್ಲನೆ ನಾನು ನಡೆದು ಹೋಗಿ ಅವನ ಪಕ್ಕದಲ್ಲಿ ನಿಲ್ಲುತ್ತೇನೆ. ಅವನು ತಲೆ ಎತ್ತಿ, ಎರಡು ಕೈಗಳಿಂದ ಬಾಯಿ ಸುತ್ತಲೂ ಉಂಗುರ ಮಾಡಿ, ಜೋರಾದ ತುಂಬು ಕಂಠದಿಂದ ನೀಳವಾಗಿ, ಕೂಗುತ್ತಾನೆ.

"ಬಾಬಾ. . ."

ಕೆಲವು ಕ್ಷಣಗಳ ನಂತರ, ಆ ಬೆಟ್ಟಗಳನ್ನು ಅದನ್ನು ಮುಸುಕಾಗಿ, ಅಂದರೆ ನಿಚ್ಚಳವಾಗಿ ಮರಳಿ ನಮಗೇ ಎಸೆಯುತ್ತವೆ.

"ಬಾಬಾ. .. ಬಾಬಾ. . ."

ಮತ್ತೆ ಅವನು ಕೂಗುತ್ತಾನೆ.

"ಕಾಕಾ. . . "

"ಕಾಕಾ. . . . ಕಾಕಾ. . ."

ಗೆಲುವಿನ ಮುಖ ಮಾಡಿ, ನನ್ನತ್ತ ನೋಡಿ ನಗುತ್ತಾನೆ, ಆ ಗಾಂಭೀರ್ಯವನ್ನು ಸೀಳಿ ಬಂದ, ಆ ತುಂಬು ಕಂಠದ ಕೂಗು ನನ್ನನ್ನು ಸುತ್ತುವರಿದು ಅಲ್ಲೆಲ್ಲ ಆವರಿಸುತ್ತದೆ. ನನ್ನನ್ನು ಅಚ್ಚರಿಯಿಂದ ಮೂಕನನ್ನಾಗಿ ಮಾಡುತ್ತದೆ.

ನಾನು ನನ್ನ ಜೇಬಿನಲ್ಲಿ 50 ಪೈಸೆಗಾಗಿ ತಡಕಾಡುತ್ತೇನೆ. ತಕ್ಷಣ ಅವನು ಕೈ ಅಡ್ಡ ತಂದು ಹೇಳುತ್ತಾನೆ, "ಇಲ್ಲ. . . ಇಲ್ಲ. .. ಇದಕ್ಕೆ ನೀವು ದುಡ್ಡು ಕೊಡಬೇಕಾಗಿಲ್ಲ".

ಎಲ್ಲವನ್ನೂ ದುಡ್ಡಿಗೆ ಕೊಳ್ಳುವ ಅಭ್ಯಾಸವಾಗಿ ಹೋಗಿರುವ ನಾನು ಏನು ಹೇಳಲೂ ತೋಚದೆ ತಬ್ಬಿಬ್ಬಾಗುತ್ತೇನೆ, "ಪರವಾಗಿಲ್ಲ. . . ತಗೋ" ಎಂದು ಗೊಣಗುತ್ತೇನೆ.

ಅವನು ಉತ್ತರವಿಲ್ಲದೆ, ತನ್ನ ಕೊಳಕು ಚೀಲದಲ್ಲಿ ಕೈ ಹಾಕಿ ಒಂದು ಕೆಂಪು ಪೇಪರಿನಲ್ಲಿ ಸುತ್ತಿದ ಪೊಟ್ಟಣ ಹೊರಗೆ ತೆಗೆಯುತ್ತಾನೆ. "ಸ್ವಲ್ಪ. . .. ಈ ಚಿಕ್ಕಿ ತಿನ್ನಿ.. .. ದಣಿವಾಗಿರಬೇಕು ಅಷ್ಟು ದೂರದಿಂದ ಬಂದು. . ."

"ಬೇಡ.. . ಬೇಡ. . .." ನಾನು ಹಿಂದೆಗೆಯುತ್ತೇನೆ.

"ಇಲ್ಲ ಸಾಬ್, ಬೇಡ ಎನ್ನಬೇಡಿ, ಈ ಹವಾದಲ್ಲಿ ಬೆಲ್ಲ ಗಂಟಲಿಗೆ ಒಳ್ಳೆಯದು ಸಾಬ್. .. ತೆಗೆದುಕೊಳ್ಳಿ. . ."

ನಾನು ಮತ್ತಷ್ಟು ಹಿಂಜರಿಯುವುದನ್ನು ನೋಡಿ ಕಟುವಾಗಿ ಹೇಳುತ್ತಾನೆ, "ನಿಮಗೆ ಬೇಡದಿದ್ದರೆ ಬೇಚಾರಾ ನಿಮ್ಮ ಘೋಡಾವಾಲಾನಿಗೆ ಕೊಡಿ ಅಥವಾ ನಿಮ್ಮ ಕುದುರೆಗಾದರೂ ಕೊಡಿ. . . ಅದೂ ಮೂಕ ಪ್ರಾಣಿ. . . ದಣಿದಿರುತ್ತದೆ".

"ನಾನು ನಡೆದೇ ಬಂದಿದ್ದೇನೆ. . ."ಎಂದು ಹೇಳುತ್ತಿರುವುದನ್ನೂ ಕೇಳಿಸಿಕೊಳ್ಳದೆ, ನನ್ನ ಕೈಯಲ್ಲಿ ಆ ಪೊಟ್ಟಣವನ್ನು ಬಲವಂತದಿಂದ ತುರುಕುತ್ತಾನೆ. ನಾನು ಮಾತಿಲ್ಲದೆ ಅದನ್ನು ತೆಗೆದುಕೊಂಡು, ಹಿಂದೆ ಮುಂದೆ ತಿರುಗಿಸಿ ನೋಡಿದಾಗ, ಅವನು ಕೆಲವು ಹೆಜ್ಜೆ ನಡೆದು, ನನಗೆ ಬೆನ್ನು ತಿರುಗಿಸಿ ನಿಂತಿರುತ್ತಾನೆ. ಆಗ ನನಗೆ ಪೊಟ್ಟಣದ ಇನ್ನೊಂದು ಕಡೆ ಅಂಟಿಸಿರುವ ಪ್ರಿಂಟ್ ಮಾಡಿದ ಲೇಬಲ್ ಕಂಡು ಬರುತ್ತದೆ. ಅದರ ಮೇಲೆ ದೊಡ್ಡ ಅಕ್ಷರಗಳಲ್ಲಿ ಬರೆದಿರುತ್ತದೆ:

BUY OUR FAMOUS

KWALITY CHIKKI

SHOP NO. 11, K.B

ROAD, MATHERAN

ಕೆಳಗಡೆ ಚಿಕ್ಕದಾಗಿ ಬರೆದಿರುತ್ತದೆ.

CRUSHED GROUND NUTS - 100 GMS Rs. 1-20

ನಾನು ಮಾತಿಲ್ಲದೆ ಜೇಬಿನಿಂದ ರೂ. 1.20 ತೆಗೆದು ಅವನಿಗೆ ಕೊಟ್ಟಾಗ, ಅವನು ಸಲಾಂ ಹೊಡೆಯುತ್ತಾ ನಗುತ್ತಾ ಕೇಳುತ್ತಾನೆ. "ಎಲ್ಲಾ ಪಾಯಿಂಟ್ ಗಳೂ ನೋಡಿಯಾಯ್ತಾ ಸಾಬ್...? " ನಾನು ತಲೆ ಹಾಕಿದಂತೆ "ಬೊಂಬಾಯಿಗೆ ವಾಪಸು ಹೋಗುವಾಗ ನಮ್ಮ ಅಂಗಡಿಯಿಂದಲೇ ಚಿಕ್ಕಿ ಕೊಂಡುಕೊಳ್ಳಿ. ಅಡ್ರೆಸ್ ಇದರಲ್ಲಿದೆ. . ." ಎಂದು ಬೊಟ್ಟು ಮಾಡಿ ಆ ಪೊಟ್ಟಣದತ್ತ ತೋರಿಸಿ ಮತ್ತೆ ಹಲ್ಲು ಕಿರಿಯುತ್ತಾ ಸಲಾಂ ಹೊಡೆಯುತ್ತಾನೆ. ಅವನು ನನಗೆ ಮಾರಿದ್ದೇನು ಎಂದು ಅರ್ಥವಾಗದೆ, ನಾನು ತಲೆ ಕರೆದುಕೊಳ್ಳುತ್ತಾ, ನಿಧಾನವಾಗಿ ವಾಪಸ್ಸು ಕಾಲು ಹಾಕುತ್ತೇನೆ.

# ವೃತ್ತಿ ರಂಗಭೂಮಿ – ಹವ್ಯಾಸಿ ರಂಗಭೂಮಿ



✍ ಎಂ.ಎ.ಎನ್.ಪ್ರಸಾದ್

ಅದು ವೃತ್ತಿರಂಗಭೂಮಿಯಲ್ಲಿ ಪೌರಾಣಿಕ ನಾಟಕಗಳು ವಿಜೃಂಭಿಸುತ್ತಿದ್ದ ಕಾಲ. ನಾಟಕಗಳಲ್ಲಿ ಹಾಡಿಗೆ ಪ್ರಾಮುಖ್ಯತೆ. ಇದಕ್ಕೆ ಒಂದು ಹೊಸ ತಿರುವನ್ನು ಕೊಟ್ಟು, ಕನ್ನಡದ ಹವ್ಯಾಸಿ ನಾಟಕರಂಗದಲ್ಲಿ ಸಾಮಾಜಿಕ ನಾಟಕಗಳನ್ನು ತಂದವರು ಟಿ.ಪಿ.ಕೈಲಾಸಂ ಮತ್ತು ಶ್ರೀರಂಗ. ಇವರಿಬ್ಬರೂ ಹೊರನಾಡಿನಲ್ಲಿ ಅವರ ನಾಟಕಗಳನ್ನು ನೋಡಿ, ಅವುಗಳಿಂದ ಪ್ರಭಾವಿತರಾಗಿ, ಆ ರೀತಿಯ ನಾಟಕಗಳನ್ನು ನಮ್ಮ ರಂಗ ಭೂಮಿಯಲ್ಲಿ ತರಲು ಯತ್ನಿಸಿದರು. ಇವರ ದೃಷ್ಟಿಯಲ್ಲಿ ವೃತ್ತಿ ರಂಗ ಭೂಮಿಯ ಪೌರಾಣಿಕ ನಾಟಕಗಳು ಅಂದಿನ ಪರಿಸ್ಥಿತಿಗೆ ಅಪ್ರಸ್ತುತವಾಗಿ ತೋರಿತು. ನಮ್ಮ ಸುತ್ತು ಮುತ್ತಲಲ್ಲಿ ನಡೆಯುವ ಸಾಮಾಜಿಕ ಸನ್ನಿವೇಶಗಳೇ ನಾಟಕದ ವಸ್ತುವಾಗಿ ಇಟ್ಟುಕೊಂಡು ಇವರು ಹೊಸರೀತಿಯ ನಾಟಕಗಳನ್ನು ಬರೆದರು. ಪೌರಾಣಿಕ ನಾಟಕಗಳನ್ನು ಇಬ್ಬರೂ ಅಣಕಿಸಿದ್ದಾರೆ, ಕೈಲಾಸಂ ಅವರು 'ನಂ ಕಂಪ್ನಿ'ಯಲ್ಲಿ ಮತ್ತು ಶ್ರೀರಂಗನವರ 'ಕತ್ತಲೆ ಬೆಳಕು'ವಿನಲ್ಲಿ. ಆದರೆ, ಇಬ್ಬರದೂ ಬೇರೆ ಬೇರೆ ಶೈಲಿ. ಎರಡನ್ನೂ ಪಕ್ಕ ಪಕ್ಕದಲ್ಲಿ ಇಟ್ಟು ನೋಡೋಣ.

ಆಗಿನ ಕಾಲದಲ್ಲಿ ಪ್ರಚಲಿತವಾಗಿದ್ದ ವೃತ್ತಿರಂಗಭೂಮಿಯ ನಾಟಕಗಳನ್ನು ಅಣಕಮಾಡಲೆಂದು ರಚಿಸಿದ ನಾಟಕ 'ನಂ ಕಂಪ್ನಿ'. ಆ ಕಾಲದ ನಾಟಕಗಳಲ್ಲಿ ಹಾಡಿಗೇ ಪ್ರಾಮುಖ್ಯತೆ. ಎಲ್ಲಿ ಅಂದರೆ ಅಲ್ಲಿ ಹಾಡು. ಕಥೆಯು ದೇವರು ಅಥವಾ ರಾಜ ರಾಣಿಯರ ಬಗ್ಗೆ ಇರುತ್ತಿತ್ತು. ನಂ ಕಂಪ್ನಿ ಯಲ್ಲಿ ಕೈಲಾಸಂ ಶೂರ್ಪನಖಿಯ ಕುಲಜಾತರ ಬಗ್ಗೆ ಕಥೆಯನ್ನು ಕಟ್ಟುತ್ತಾರೆ. ಅಂದಿನ ಪೌರಾಣಿಕ ನಾಟಕದ ಪ್ರಾರಂಭದಲ್ಲಿ ಸೂತ್ರದಾರ ಮತ್ತು ನಟಿಯು ವೇದಿಕೆಯ ಮೇಲೆ ಬಂದು ವಸಂತ ಋತುವಿನ ಸೌಂದರ್ಯದ ಬಗ್ಗೆ ಒಂದು ಹಾಡನ್ನು ಹಾಡುತ್ತಾರೆ. ಆದರೆ 'ನಂ ಕಂಪ್ನಿ' ಯಲ್ಲಿ ಈ ಹಾಡು 'ರಾ ರಾಜಿಸುತಿಹುದು ಬೇಸಿಗೆ' ಎಂದು ಬೇಸಿಗೆಯ ಗುಣಗಾನ ಮಾಡುತ್ತದೆ.

ಶೂರ್ಪನಿಖಿಯ ಕುಲಜಾತರಿಗೆ ಮಕ್ಕಳಿಲ್ಲದೆ ಪಾಡು ಪಡುವುದು ಮತ್ತು ರಾಜನು ಕಾಡಿನಲಿ ಓಡಾಡುವಾಗ ಋಷಿಯೊಬ್ಬನಿಗೆ ತಗುಲಿಸಿ ಹಾಡುತ್ತಾ ಕ್ಷಮೆ ಕೇಳುವುದು. ಹಾಡಿನ ಅನುಪ್ರಾಸವನ್ನು ಗಮನಿಸಿ. 'ಮೂಢನ ಮನ್ನಿಸಲೇ ಮುನಿಯೆ ಮಾಡಿದಪರಾಧಕ್ಕೆ'. ಕಂಪನಿ ಮಟ್ಟುಗಳಲ್ಲಿ ಸಂದರ್ಭಕ್ಕೆ ಸರಿಯಾಗಿ ಹಾಡುಗಳು. ನಂ ಕಂಪ್ನಿಯಲ್ಲಿ ವೃತ್ತಿ ರಂಗಭೂಮಿಯ ನಾಟಕಗಳನ್ನು ಮಾತ್ರವಲ್ಲ, ಅದರ ಅವಿದ್ಯಾವಂತ ನಟರು ಕನ್ನಡವನ್ನು ಆಡುವ ಆಭಾಸ ಮಾದರಿಯನ್ನೂ ಅಣಕಿಸುತ್ತದೆ. ಹಣಗಳಿಕೆಗೇ ಪ್ರಾಮುಖ್ಯತೆ ಕೊಡುತ್ತಿದ್ದ ವೃತ್ತಿ ರಂಗಭೂಮಿಯ ನಾಟಕಗಳನ್ನು ಹೆಜ್ಜೆ ಹೆಜ್ಜೆಗೂ ಕೈಲಾಸಂ ಹಾಸ್ಯ ಮಾಡುತ್ತಾರೆ.

ನಾಟಕದ ವಸ್ತು ಬದಲಾಗುತ್ತಿರುವ ಜೀವನ ಶೈಲಿಗೆ ಒಗ್ಗುವಂತಿರಬೇಕು ಎಂಬುದೇ ನಾಟಕಕಾರರ ಉದ್ದೇಶ. ಅದು ಬದಲಾಗದೆ ಗತಕಾಲದ ಜೀವನವನ್ನು ಚಿತ್ರಿಸಿದರೆ ಆಗುವ ಹಾಸ್ಯಕ್ಕೆ ನಾಟಕಕಾರರು ಕನ್ನಡಿ ಹಿಡಿದಿದ್ದಾರೆ. ಈ ನಾಟಕದ ಪ್ರಯೋಗವನ್ನು ನೋಡಿದರೆ ಅಗುವ ಅನುಭವ ಅದನ್ನು ಓದಿದರೆ ಆಗುವುದಿಲ್ಲ. ಕಂಪನಿಯನ್ನು ಬದುಕಿಸಲು ಈ ನಾಟಕದ ಕೊನೆಯಲ್ಲಿ ಅವರು ಹೇಳುತ್ತಾರೆ

"ಕಲೆಕ್ಷನ್ ಘನಪಡಿಸಿ
ಕಂಪನಿಯ ಬದುಕಿಸೋ॥
ಕಾಪ್ಲಿಮೆಂಟರಿಗಳ ಕಟಾಯಿಸಿ
ಕ್ರೆಡಿಟರ ಗುಮಾಯಿಸಿ
ಈ ಕುರಿಗಳ ಜಮಾಯಿಸಿ
ಕಲೆಕ್ಷನ್ ಘನಪಡಿಸಿ

ಕಂಪನಿಯ ಬದುಕಿಸೊ॥"

ಶ್ರೀರಂಗನವರ 'ಕತ್ತಲೆ ಬೆಳಕು'ವಿನಲ್ಲಿ ಒಬ್ಬ ನಾಟಕಕಾರನು ಬೇಸರ ಬಂದು ನಾಟಕವನ್ನು ಬರೆಯುವುದನ್ನು ನಿಲ್ಲಿಸಿದ್ದಾನೆ. ಒಂದು ನಾಟಕದ ಕಂಪನಿಯ ಮಾಲಿಕ ಮತ್ತು ಮ್ಯಾನೇಜರ್ ಬಂದು ಅವನನ್ನು ಒಂದು ನಾಟಕವನ್ನು ಬರೆದು ಕೊಡುವಂತೆ ಬೇಡುತ್ತಾರೆ. ಯಾವರೀತಿಯ ನಾಟಕ ಬೇಕು ಎಂದು ಕೇಳಿದರೆ, ಅವರಿಗೆ ಯಾವುದಾದರೂ ಪರವಾಗಿಲ್ಲ ಆದರೆ ಅದರಲ್ಲಿ ಈ ರೀತಿಯ ಸೀನ್ ಇರಬೇಕು ಎನ್ನುತ್ತಾರೆ. ಅವರಿಗೆ ನಾಟಕ ಸಾಮಾಜಿಕವೇ, ಪೌರಾಣಿಕವೇ ಇತ್ಯಾದಿ ಯಾವುದಾದರೂ ಚಿಂತೆ ಇಲ್ಲ. ಆದರೆ ಅದರಲ್ಲಿ ಜನಪ್ರಿಯವಾದ ಸೀನುಗಳು ಇವೆಯೇ ಎಂಬುದೇ ಮುಖ್ಯ. ಕಂಪನಿಯವರಿಗೆ ನಾಟಕದಲ್ಲಿ ಯಾವ ಯಾವ ಸೀನ್ ಗಳಿದ್ದರೆ ಜನ ನಾಟಕ ನೋಡಲು ಬರುತ್ತಾರೆ ಯೆಂಬುದು ಗೊತ್ತು. ಇದು commercial cinema ದಂತೆ. ಅದಕ್ಕೆ ಒಂದು formula ಇರುವ ಹಾಗೆ, ಇದಕ್ಕೂ ಒಂದು ಇದೆ. ಅದಕ್ಕೆ ಅವರು ನಾಟಕ ಯಾವುದೇ ಆಗಲಿ, ಅದರಲ್ಲಿ ಆ ಸೀನ್ ಗಳನ್ನು ಸೇರಿಸಲು ನಾಟಕಕಾರರಿಗೆ ಹೇಳುತ್ತಾರೆ.

ನಾಟಕದಲ್ಲಿ ಬರುವ ನಾಟಕೀಯವಾದ ಸನ್ನಿವೇಶಗಳು ನಿಜ ಜೀವನದಿಂದ ಪ್ರೇರಿತವಾದದ್ದು ಎಂಬುದು ನಾಟಕಕಾರರ ಮತ. ಕತೆ ಮುಂದುವರಿದಂತೆ, ಆ ರೀತಿಯ ಸನ್ನಿವೇಶಗಳು ನಾಟಕದಲ್ಲಿ ಏರ್ಪಡುತ್ತವೆ. ಈ ಮಧ್ಯೆ ಒಬ್ಬ ಪೊಲೀಸ್ ಪ್ಯಾದೆಯ ಪಾತ್ರ ಸಾಕಷ್ಟು ಹಾಸ್ಯ ಪ್ರಸಂಗಗಳನ್ನು ಒದಗಿಸುತ್ತದೆ.

ಇಬ್ಬರು ನಾಟಕಕಾರರೂ ಕಂಪನಿಯ ನಾಟಕಗಳನ್ನು ಲೇವಡಿ ಮಾಡಿದ್ದಾರೆ. ಕೈಲಾಸಂ ನಂಕಂಪನಿಯಲ್ಲಿ ಕಂಪನಿ ನಾಟಕದ ಶೈಲಿಯಲ್ಲೇ ನಾಟಕ ರಚಿಸಿ, ಹೆಜ್ಜೆ ಹೆಜ್ಜೆಗೂ ಅದರ ಹಾಸ್ಯ ಮಾಡಿದ್ದಾರೆ. ಶ್ರೀರಂಗನವರು ಕಂಪನಿ ನಾಟಕದ ಶೈಲಿಯನ್ನು ಬಳಸಿಲ್ಲ, ಆದರೆ ಅದರ weak points ಅನ್ನು ಚೆನ್ನಾಗಿ ಈ ನಾಟಕದಲ್ಲಿ expose ಮಾಡಿದ್ದಾರೆ.

*************

## ಉಮಾ ರಾಮರಾವ್ ಅವರಿಗೆ ಡಾಕ್ಟರೇಟ್ ಪದವಿ



ಮುಂಬಯಿ ವಿಶ್ವವಿದ್ಯಾಲಯದ ಸಂಶೋಧನ ಸಹಾಯಕರಾಗಿರುವ ಉಮಾ ರಾಮರಾವ್ ಅವರು ಬರೆದು ಸಲ್ಲಿಸಿದ 'ಭೈರಪ್ಪನವರ ಎರಡು ಕಾದಂಬರಿಗಳ ಬಹು ಆಯಾಮ' ಎಂಬ ಮಹಾಪ್ರಬಂಧಕ್ಕೆ ಮುಂಬಯಿ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ.

ಉಮಾ ರಾಮರಾವ್ ಅವರು ಮುಂಬಯಿ, ವಿಶ್ವವಿದ್ಯಾಲಯ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ ಅವರ ಮಾರ್ಗದರ್ಶನದಲ್ಲಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿ ಮುಂಬಯಿ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ್ದರು. ನಮ್ಮ ನಾಡಿನ ಹೆಮ್ಮೆಯ ಸಾಹಿತಿಯಾಗಿರುವ ಡಾ. ಎಸ್. ಎಲ್. ಭೈರಪ್ಪನವರ ಎರಡು ಪ್ರಮುಖ ಕಾದಂಬರಿಗಳಾದ 'ಪರ್ವ' ಹಾಗೂ 'ಉತ್ತರಕಾಂಡ'ಗಳನ್ನು ಅಧ್ಯಯನ ಮಾಡಿ ಮೂಲ ಮಹಾಭಾರತ ಮತ್ತು ರಾಮಾಯಣಗಳೊಂದಿಗೆ ಅವುಗಳನ್ನು ಹೋಲಿಸಿ ಕೆಲವು ಹೊಸ ಹೊಳಹುಗಳನ್ನು ಸಂಶೋಧಕಿಯು ನೀಡಿದ್ದಾರೆ. 'ಸಂಶೋಧಕಿಯ ಬರವಣಿಗೆ ಸರಳ, ಸುಂದರ, ನೇರ, ಸ್ಪಷ್ಟ ಹಾಗೂ ಗಂಭೀರವಾದ ಶೈಲಿಯಿಂದ ಕೂಡಿದೆ. ಸಂಶೋಧನೆ ಅಧ್ಯಯನಕ್ಕೆ ಸಮರ್ಥವಾದ ಶೈಲಿ ಇದಾಗಿದೆ. ಡಾ. ಭೈರಪ್ಪನವರ ಸಾಹಿತ್ಯದ ಅಧ್ಯಯನಕ್ಕೆ ಹೊಸದೊಂದು ಪರಾಮರ್ಶನ ಗ್ರಂಥವನ್ನು ಈ ಮೂಲಕ ಸೇರಿಸಲಾಯಿತು' ಎಂದು ಮೌಲ್ಯಮಾಪಕರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

ಮೂಲತ: ಬೆಂಗಳೂರಿನವರಾದ ಉಮಾ ರಾವ್ ಅವರು ಕಲ್ಬುರ್ಗಿಯಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಪೂರ್ರೈಸಿದ್ದಾರೆ. ಅವರು ಗುಲ್ಬರ್ಗಾದಲ್ಲಿ ಬಿ.ಇ ಎಲೆಕ್ಟ್ರಾನಿಕ್ಸ್ ಮತ್ತು ಟೆಲಿಕಮ್ಯೂನಿಕೇಶನ್‌ನಲ್ಲಿ ಶಿಕ್ಷಣವನ್ನು ಪೂರೈಸಿದ್ದಾರೆ. ನಂತರ ಮುಂಬಯಿಯ ಪ್ರತಿಷ್ಠಿತ ವಿ.ಜೆ.ಟಿ.ಐ, ಮಾತುಂಗ ಇಲ್ಲಿ ಎಂ.ಇ ಎಲೆಕ್ಟ್ರಾನಿಕ್ಸ್ ಮತ್ತು ಪಿಎಚ್.ಡಿ ಪದವಿಗಳನ್ನು ಪಡೆದಿದ್ದಾರೆ.

ಉಮಾ ರಾಮರಾವ್ ಅವರು ಮುಂಬಯಿಯ ಪ್ರಸಿದ್ಧ ಇಂಜಿನಿಯರಿಂಗ್ ಕಾಲೇಜೊಂದರಲ್ಲಿ ಪ್ರಾಧ್ಯಾಪಕರಾಗಿ, ವಿಭಾಗ ಪ್ರಮುಖರಾಗಿ ಸುದೀರ್ಘವಾದ ಸೇವೆಯನ್ನು ಸಲ್ಲಿಸಿದ್ದಾರೆ. ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಅವರಿಗೆ ಅಪಾರವಾದ ಆಸಕ್ತಿ. ತದನಂತರ ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗದಿಂದ ಎಂ.ಎ ಪದವಿಯನ್ನು ಪ್ರಥಮ ಶ್ರೇಣಿ ಹಾಗೂ ವರದರಾಜ ಆದ್ಯ ಬಂಗಾರದ ಪದಕದೊಂದಿಗೆ ಉತ್ತೀರ್ಣರಾಗಿದ್ದು, ಡಾ.ಜಿ.ಎನ್.ಉಪಾಧ್ಯ ಅವರ ಮಾರ್ಗದರ್ಶನದಲ್ಲಿ ಎಂ.ಫಿಲ್ ಪದವಿಯನ್ನು ಪಡೆದಿದ್ದಾರೆ. 'ಭೈರಪ್ಪನವರ ಪರ್ವ–ಆಯಾಮ ಮತ್ತು ಅನನ್ಯತೆ' ಅವರ ಎಂ.ಫಿಲ್ ಸಂಪ್ರಂಬಂಧ ಸಾಹಿತ್ಯ ಭಂಡಾರ, ಬೆಂಗಳೂರಿನಿಂದ ಪ್ರಕಟವಾಗಿದ್ದು ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾಗಿದೆ.

ಉಮಾ ರಾವ್ ಅವರು ಕಳೆದ ಎರಡು ದಶಕಗಳಿಂದ ಅಣುಶಕ್ತಿ ನಗರದಲ್ಲಿ ಆಂಗ್ಲ ಮಾಧ್ಯಮದಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಕನ್ನಡವನ್ನು ಕಲಿಸುವ ಕಾಯಕದಲ್ಲಿ ನಿರತರಾಗಿದ್ದರು. ಈಗಲೂ ಕನ್ನಡ ಕಲಿಸುವ ಕೆಲಸದಲ್ಲಿ ಅವರು ಸಕ್ರಿಯರಾಗಿದ್ದು, ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗದಲ್ಲಿಯೂ ಸರ್ಟಿಫಿಕೇಟ್ ಕೋರ್ಸ್, ಡಿಪ್ಲೋಮಾ, ಎಂ.ಎ ತರಗತಿಗಳಿಗೆ ಬೋಧನೆ ಮಾಡುತ್ತಿದ್ದಾರೆ.

# ಮಂಗಳವಾರ ಕೆಟ್ಟದ್ದು

✍ ಬಿ.ಎಸ್.ಸತೀಷ್, ಮೈಸೂರು

ಮಹತ್ವಾಕಾಂಕ್ಷೆಯ ಯಾವುದೇ ಕೆಲಸವನ್ನು ಶುರು ಮಾಡಲು ತುಂಬಾ ಯೋಚಿಸಬೇಕಾದ ಸಂಗತಿಗಳು ಹಲವಾರು. ಯಾವ ದಿನದಿಂದ ಪ್ರಾರಂಭಿಸಬೇಕೆಂಬ ಯೋಚನೆಗೊಳಗಾಗುವುದು ಸಾಮಾನ್ಯ ಸಂಗತಿ. ಎಲ್ಲದರಲ್ಲಿಯೂ ಉತ್ತಮವಾದ ಗುಣಮಟ್ಟವನ್ನು ಹುಡುಕುವ / ನಿರೀಕ್ಷಿಸುವ ಮನೋಭಾವವನ್ನು ಹೊಂದಿರುವ ನಾವು ದಿನದ ಆಯ್ಕೆಯಲ್ಲಿಯೂ ಅದನ್ನು ಬಿಟ್ಟಿಲ್ಲ. ನಮ್ಮ ವಾದಗಳನ್ನು ಬಲವಾಗಿ ಸಮರ್ಥಿಸಲು ತಾರ್ಕಿಕ ಹಾಗೂ ಭಾವನಾತ್ಮಕ ವಿಚಾರಗಳು ಇದ್ದೇ ಇರುತ್ತವೆ. ಸಂಸ್ಕೃತದಲ್ಲಿ ಮಂಗಳ ಎನ್ನುವ ಪದ ನಮ್ಮ ಹೆಸರುಗಳಲ್ಲಿವೆ. ಆದರೆ ಮಂಗಳವಾರ ಮಾತ್ರ ಕೆಟ್ಟದ್ದಾಗಿದೆ. ಹಾಗಾಗಿ ಯಾವ ಶುಭ ಕಾರ್ಯವನ್ನು ಅಂದು ಶುರು ಮಾಡಬಾರದೆಂದು ತೀರ್ಮಾನ ಮಾಡಿಬಿಟ್ಟಿದ್ದೇವೆ.

ಶುದ್ಧತೆಗೆ - ಪವಿತ್ರತೆಗೆ ಮತ್ತೊಂದು ಹೆಸರು ಗಂಗೆ ಆದರೆ ಇಂದು ಗಂಗಾ ನದಿಯನ್ನು ನೋಡಿದರೂ ಕಾಯಿಲೆಗಳು ಬಂದು ಬೀಳುತ್ತವೆ. ಶವಗಳನ್ನು ಗಂಗಾ ನದಿಗೆ ಎಸೆಯುವುದರಿಂದ ಸತ್ತವರಿಗೆ ಮೋಕ್ಷ ಪ್ರಾಪ್ತಿಯಾಗುವುದು, ಎಂಬ ಪೌರಾಣಿಕ ನಂಬಿಕೆ ಇರುವುದರಿಂದ ಗಂಗೆಗೆ ಈ ಗತಿ ಬಂದಿದೆ.

ಅದೇ ರೀತಿಯ ಪೂಜ್ಯವಸ್ತು ಗೋವು! ಗೋವಿನಲ್ಲಿ 33 ಕೋಟಿ ದೇವತೆಗಳು ನೆಲೆಸಿದ್ದಾರೆ ಎಂದು ಪುರಾಣದಲ್ಲಿದೆ. ಆದರೆ ವರ್ಷಕ್ಕೆ 66 ಲಕ್ಷ ಗೋವುಗಳು ಮನುಷ್ಯನ ಸ್ವಾರ್ಥಕ್ಕಾಗಿ ಕೊಲೆಯಾಗುತ್ತಿವೆ. ಇದನ್ನು ಯಾವ ಧಾರ್ಮಿಕ ಮುಖಂಡರೂ ವಿರೋಧಿಸುತ್ತಿಲ್ಲ. ನಮಗೆ ಗಂಗೆಯ ಪುರಾಣ ಬೇಕು. ಗೋವಿನ ಪುರಾಣ ಬೇಡ! ನಮ್ಮ ದೇಶದಲ್ಲಿ ನಾಗಾರಾಧನೆ ಸಾಮಾನ್ಯವಾಗಿದೆ. ಇದರ ಮೂಲ ಭಕ್ತಿಗಿಂತ ಭಯವೇ ಮೂಲ ಕಾರಣವಾಗಿದೆ. ನಮ್ಮ ಜೀವನದ ಏರುಪೇರುಗಳು, ಲೋಪದೋಷಗಳು, ಸುಖಶಾಂತಿಯ ಅಭಾವಗಳು, ಕಷ್ಟ ನಷ್ಟಗಳು, ಸಾವು ನೋವುಗಳು, ನಾಗದೇವತೆಯ ಅಸಮಧಾನರಿಂದ ಸಂಭವಿಸುತ್ತಿವೆ ಎಂಬ ಬಲವಾದ ನಂಬಿಕೆಯಿಂದಾಗಿ ಸರ್ಪಶಾಂತಿಯ ಆಚರಣೆಗಳು ನಡೆಯುತ್ತಿವೆ. ಹಿಂದಿನ ಜನ್ಮಗಳಲ್ಲಿ ನಾವು ಮಾಡಿದ ಅನಾಚಾರ ಅನಾಹುತಗಳಿಗೆ ಈ ಜನ್ಮದಲ್ಲಿಯಾದರೂ ಪ್ರಾಯಶ್ಚಿತ ಮಾಡಿಕೊಂಡು ನೆಮ್ಮದಿಯಾಗಿ ಇರಬಹುದೆಂಬ ಭರವಸೆಯಿಂದಾಗಿ ಸುಬ್ರಹ್ಮಣ್ಯ ಕ್ಷೇತ್ರಗಳಲ್ಲಿ ಕಾಲಿಡಲೂ ಜಾಗವಿರದ ಪರಿಸ್ಥಿತಿ. ಹಾವುಗಳಿಗೆ ಇಷ್ಟೊಂದು ಹೆದರುವ ನಾವು ಗೋವುಗಳಿಗೆ ಹೆದರುವುದಿಲ್ಲ. ಏಕೆಂದರೆ ಸರ್ಪ ಶಾಂತಿಯಂತಹ ಆಚರಣೆಗಳಿವೆಯೇ ಹೊರತು ಗೋ ಶಾಂತಿಯಂತಹ ಆಚರಣೆಗಳಿಲ್ಲ.

ಕಾಲ ಬದಲಾಗಿದೆ. ಎಲ್ಲವೂ ಹೈ -ಫೈ ಆಗಿದೆ. ರಾಜಕೀಯದಲ್ಲಿದ್ದ ಜನ ಅಧಿಕಾರಕ್ಕೆ ಬಂದ ಮೇಲೆ ದೇಶ ವಿದೇಶಗಳನ್ನು ಸರ್ಕಾರದ ಖರ್ಚಿನಲ್ಲಿ "ಅಧ್ಯಯನ"ಕ್ಕಾಗಿ ಸುತ್ತಿ ಬರುತ್ತಾರೆ. ಅವರ ಪ್ರವಾಸದ ನಂತರದ ಪರಿಣಾಮಗಳನ್ನು ಕಾಣಲು ಸಾಧ್ಯವಿಲ್ಲ. ನಮ್ಮ ರಸ್ತೆಗಳೇ ಇದಕ್ಕೆ ಸಾಕ್ಷಿ.

ಇದಕ್ಕಿಂತಲೂ ಆಶ್ಚರ್ಯಕರವಾದ ಸಂಗತಿಗಳಿವೆ. ಹೊಯ್ಸಳ ಶಿಲ್ಪ ಕಲೆಯ ದೇವಾಲಯಗಳ ಉದಾಹರಣೆಯನ್ನು ಹೇಳಬಹುದು. ತಾತ್ವಿಕ-ಧಾರ್ಮಿಕ-ಉತ್ತಮ ಮೌಲ್ಯಗಳಿಲ್ಲದ ಕೆಲವು ಸಂಗತಿಗಳು ನಮ್ಮ ಗಮನಕ್ಕೆ ಬರುತ್ತವೆ. ಇಂತಹ ವಿಚಾರಗಳಿಗೆ ರಾಜಗುರು ಶ್ರೀ ರಾಮಾನುಜಾಚಾರ್ಯರ ಒಪ್ಪಿಗೆ ಇತ್ತೇ ಎನ್ನುವ ಪ್ರಶ್ನೆಗೆ ಉತ್ತರ ದೊರಕುವುದಿಲ್ಲ.

ಇದಕ್ಕಿಂತ ಉತ್ತಮ ಉದಾಹರಣೆ ವಿಜಯನಗರ ಕಾಲದ್ದು. ಆ ಕಾಲದಲ್ಲಿಯೂ ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಲಕ್ಷಾಂತರ ಪ್ರಾಣಿಗಳನ್ನು ಬಲಿಕೊಡುವ ಪದ್ಧತಿ ಇತ್ತು! ಕೆರೆಗಳನ್ನು ನೀರಿನಿಂದ ತುಂಬಿ ತುಳುಕುವಂತೆ ಮಾಡಲು ಊರಿನ ಪ್ರಮುಖ ಸ್ತ್ರೀಯರನ್ನು ಬಲಿಕೊಡುವ ದುಷ್ಟ ಪದ್ಧತಿಗಳಿದ್ದವು. ಆ ಕಾಲದಲ್ಲಿ ರಾಜಗುರುಗಳಾಗಿದ್ದವರು ಶ್ರೀ ವ್ಯಾಸತೀರ್ಥರು. ಅವರು ಚಕ್ರವರ್ತಿಗಳಾಗಿಯೂ ಕೆಲಕಾಲ ರಾಜ್ಯಭಾರ ಮಾಡಿದ್ದರು. ಅಂತಹ ಮಹಾಮಹಿಮರೂ ಇಂತಹ ಮೂಢ ನಂಬಿಕೆಗಳ ವಿರುದ್ಧ ಪೂಜೆಗಳನ್ನು ಏಕೆ ಜಾಗೃತಗೊಳಿಸಲಿಲ್ಲ, ಎಂದು ವ್ಯಥೆಯಾಗುತ್ತದೆ.

ನಮ್ಮ "ನಾಗರಿಕತೆ" ಎಲ್ಲಿಗೆ ಬಂದು ನಿಂತಿದೆ. ಪೆಟ್ರೋಲ್-ಡೀಸೆಲ್ -ತರಕಾರಿ-ವಿದ್ಯುತ್-ನೀರು ವಾಹನಗಳು-ವಾಹನಗಳ ಬಿಡಿ ಭಾಗಗಳು, ದುಬಾರಿಯಾಗಿವೆ. ಮಧ್ಯಮ ವರ್ಗದ ಜನರ ಬದುಕನ್ನು ನಾಶ ಮಾಡಲು ಸರ್ಕಾರವೇ ಸಿದ್ಧವಾಗಿದೆ. ಎಲ್ಲಕ್ಕೂ "Exports-Analysis" ಇದ್ದೇ ಇದೆ (ಟಿವಿಯಲ್ಲಿ ಕಂಡ ಹಾಗೆ) ಕೋಟು ಹಾಕಿ ಕೊಂಡವರಿಂದ ಇಂಗ್ಲೀಷ್ ನಲ್ಲಿ ಹೇಳಿಸುತ್ತಾರೆ. ಖಾದಿ ಜುಬ್ಬಾ ಹಾಕಿಕೊಂಡಿರುವರಿಂದ ಹಿಂದಿಯಲ್ಲಿ ಹೇಳಿಸುತ್ತಾರೆ. ಇಷ್ಟಾದರೆ ಸಾಕು!!!

ಮಾನವೀಯ ಮೌಲ್ಯಗಳು ಕುಸಿದು ಬಿದ್ದಾಗ ಅನಾಹುತಗಳೇ ಆಗುತ್ತವೆ. ಅಂತವರು ಸುಮ್ಮನೆ ನಿಲ್ಲಬೇಕಾಗುತ್ತದೆ.
ನಾವೆಲ್ಲರೂ, ಹೆದರಿಕೆ-ಆಸೆಯಿಂದ ಕೆಲಸ ಮಾಡುತ್ತವೇ ಹೊರತು ತಿಳುವಳಿಕೆ ಅನುಕಂಪ ಅರಿವಿನಿಂದಲ್ಲ.
ಲೋಭ ನಮ್ಮನಿಂದು ದಾರಿ ತಪ್ಪಿಸಿದೆ.

# ಪ್ರಯಾಣ ಮಾಡುವ ಮುನ್ನ ಭಾರತದ ಮಳೆಗಳ ಬಗ್ಗೆ ನೀವು ತಿಳಿಯ ಬೇಕಾದದ್ದು

✍ ರಾಜೀವಲೋಚನ, ಬೆಂಗಳೂರು

ಭಾರತದಲ್ಲಿ ಪ್ರಮುಖ ಮಾನ್ಸೂನ್ ಋತುವು ಜೂನ್ ನಿಂದ ಸೆಪ್ಟೆಂಬರ್ ವರೆಗೆ ಇರುತ್ತದೆ ಮತ್ತು ಪ್ರತಿಯೊಬ್ಬರ ತುಟಿಗಳಲ್ಲಿ ಯಾವಾಗಲೂ ಪ್ರಶ್ನೆ ಇರುತ್ತದೆ, "ಇದು ನಿಜವಾಗಿಯೂ ಹೇಗಿದೆ ಮತ್ತು ಪ್ರಯಾಣ ಇನ್ನೂ ಸಾಧ್ಯವೇ?" ಇದು ತುಂಬಾ ಯೋಚಿಸಬೇಕಾದ್ದ ಪ್ರಶ್ನೆ .. ಏಕೆಂದರೆ ಮಳೆ ಮತ್ತು ಪ್ರವಾಹದ ಆಲೋಚನೆಯು ಯಾವುದೇ ರಜಾದಿನವನ್ನು ತಗ್ಗಿಸಲು ಸಾಕು. ಆದಾಗ್ಯೂ, ಒಳ್ಳೆಯ ಸುದ್ದಿ ಎಂದರೆ ಮಾನ್ಸೂನ್ ನಿಮ್ಮ ಪ್ರಯಾಣದ ಯೋಜನೆಗಳನ್ನು ಹಾಳುಮಾಡಲು ನೀವು ಬಿಡಬೇಕಾಗಿಲ್ಲ ಮತ್ತು ಈ ಸಮಯದಲ್ಲಿ ಪ್ರಯಾಣವು ಸಹ ಅನುಕೂಲಕರವಾಗಿರುತ್ತದೆ.

ಮಾನ್ಸೂನ್ ಸಮಯದಲ್ಲಿ ನೀವು ಭಾರತದ ಬಗ್ಗೆ ತಿಳಿದುಕೊಳ್ಳಬೇಕಾದ ಎಲ್ಲಾ ಇಲ್ಲಿದೆ, ಜೊತೆಗೆ ಮಳೆಯನ್ನು ತಪ್ಪಿಸಲು ಎಲ್ಲಿ ಪ್ರಯಾಣಿಸಬೇಕು.

**ಭಾರತದಲ್ಲಿ ಮಾನ್ಸೂನ್‌ಗೆ ಕಾರಣವೇನು?**

ಮಾನ್ಸೂನ್ ಭೂಮಿ ಮತ್ತು ಸಾಗರದ ಮೇಲೆ ವಿಭಿನ್ನ ತಾಪಮಾನದ ಪ್ರವೃತ್ತಿಗಳಿಂದ ಉಂಟಾಗುತ್ತದೆ. ಭಾರತದಲ್ಲಿ, ನೈಋತ್ಯ ಬೇಸಿಗೆ ಮಾನ್ಸೂನ್ ಕಡಿಮೆ ಒತ್ತಡದ ಪ್ರದೇಶದಿಂದ ಆಕರ್ಷಿತವಾಗಿದೆ, ಇದು ಬೇಸಿಗೆಯಲ್ಲಿ ರಾಜಸ್ಥಾನದ ಥಾರ್ ಮರುಭೂಮಿ ಮತ್ತು ಪಕ್ಕದ ಪ್ರದೇಶಗಳ ತೀವ್ರ ಶಾಖದಿಂದ ಉಂಟಾಗುತ್ತದೆ. ಮಾನ್ಸೂನ್ ಸಮಯದಲ್ಲಿ, ಗಾಳಿಯ ದಿಕ್ಕು ಹಿಮ್ಮುಖವಾಗುತ್ತದೆ. ಹಿಂದೂ ಮಹಾಸಾಗರದಿಂದ ತೇವಾಂಶ-ಹೊತ್ತ ಗಾಳಿಗಳು ಶೂನ್ಯವನ್ನು ತುಂಬಲು ಬರುತ್ತವೆ, ಆದರೆ ಅವು ಹಿಮಾಲಯ ಪ್ರದೇಶದ ಮೂಲಕ ಹಾದುಹೋಗಲು ಸಾಧ್ಯವಾಗದ ಕಾರಣ, ಅವು ಬಲವಂತವಾಗಿ ಮೇಲಕ್ಕೆ ಬರುತ್ತವೆ. ಮೋಡಗಳ ಎತ್ತರದಲ್ಲಿನ ಹೆಚ್ಚಳವು ತಾಪಮಾನದಲ್ಲಿ ಕುಸಿತಕ್ಕೆ ಕಾರಣವಾಗುತ್ತದೆ, ಮಳೆಯನ್ನು ತರುತ್ತದೆ.

ನೈಋತ್ಯ ಮಾನ್ಸೂನ್ ಭಾರತವನ್ನು ತಲುಪಿದಾಗ, ಅದು ದಕ್ಷಿಣ-ಮಧ್ಯ ಭಾರತದ ಪಶ್ಚಿಮ ಘಟ್ಟಗಳ ಪರ್ವತ ಪ್ರದೇಶದ ಸುತ್ತಲೂ ಎರಡು ಭಾಗಗಳಾಗಿ ವಿಭಜನೆಯಾಗುತ್ತದೆ. ಒಂದು ಭಾಗವು ಅರೇಬಿಯನ್ ಸಮುದ್ರದ ಮೇಲೆ ಉತ್ತರದ ಕಡೆಗೆ ಚಲಿಸುತ್ತದೆ ಮತ್ತು ಪಶ್ಚಿಮ ಘಟ್ಟಗಳ ಕರಾವಳಿ ಭಾಗದಲ್ಲಿ ಚಲಿಸುತ್ತದೆ. ಇನ್ನೊಂದು ಬಂಗಾಳ ಕೊಲ್ಲಿಯ ಮೇಲೆ ಹರಿಯುತ್ತದೆ, ಅಸ್ಸಾಂ ಮೂಲಕ, ಮತ್ತು ಪೂರ್ವ ಹಿಮಾಲಯವನ್ನು ಹೊಡೆಯುತ್ತದೆ.

ರಾಜಸ್ಥಾನದಲ್ಲಿ ನೈಋತ್ಯ ಮಾನ್ಸೂನ್ ಹಿಂಪಡೆಯುವಿಕೆ ಪ್ರಾರಂಭವಾಗುತ್ತದೆ, ಗಾಳಿಯ ಪ್ರಸರಣ ದಿಕ್ಕು ಮತ್ತೆ ಹಿಮ್ಮುಖವಾಗಿದೆ. ಇದು ಸೆಪ್ಟೆಂಬರ್ ಆರಂಭದಲ್ಲಿ ನಡೆಯಬೇಕಾಗಿತ್ತು ಆದರೆ ಇದು ವಿಳಂಬವಾಗುವುದು, ಮಾನ್ಸೂನ್ ಅವಧಿಯನ್ನು ಹೆಚ್ಚಿಸುವುದು ಸಾಮಾನ್ಯವಾಗಿದೆ.

**ಭಾರತದಲ್ಲಿ ಮಾನ್ಸೂನ್ ಸಮಯದಲ್ಲಿ ಏನನ್ನು ನಿರೀಕ್ಷಿಸಬಹುದು?**

ನೈಋತ್ಯ ಮಾನ್ಸೂನ್ ಜೂನ್ 1 ರ ಸುಮಾರಿಗೆ ದಕ್ಷಿಣದ ಕೇರಳ ರಾಜ್ಯದ ಕರಾವಳಿಯನ್ನು ತಲುಪುತ್ತದೆ. ಇದು ಸಾಮಾನ್ಯವಾಗಿ ಮುಂಬೈಗೆ ಸುಮಾರು 10 ದಿನಗಳ ನಂತರ ಆಗಮಿಸುತ್ತದೆ, ಜೂನ್ ಅಂತ್ಯದ ವೇಳೆಗೆ ದೆಹಲಿಯನ್ನು ತಲುಪುತ್ತದೆ ಮತ್ತು ಜುಲೈ ಮಧ್ಯದ ವೇಳೆಗೆ ಭಾರತದ ಉಳಿದ ಭಾಗಗಳನ್ನು ಆವರಿಸುತ್ತದೆ. ಪ್ರತಿ ವರ್ಷ ಮಾನ್ಸೂನ್ ಆಗಮನದ ದಿನಾಂಕವು ಅನೇಕ ಊಹಾಪೋಹಗಳಿಗೆ ವಿಷಯವಾಗಿದೆ. ಹವಾಮಾನ ಇಲಾಖೆಯ ಹಲವಾರು ಮುನ್ಸೂಚನೆಗಳ ಹೊರತಾಗಿಯೂ, ಯಾರಾದರೂ ಅದನ್ನು ಸರಿಯಾಗಿ ಪಡೆಯುವುದು ಅಪರೂಪ!

ಭಾರತದಲ್ಲಿ ಮಾನ್ಸೂನ್ ಅನ್ನು ಬೆನ್ನಟ್ಟಲು ಬಯಸುವಿರಾ? ಭಾರತದ ದಕ್ಷಿಣ ತುದಿಯಲ್ಲಿರುವ ತಮಿಳುನಾಡಿನ ಕನ್ಯಾಕುಮಾರಿಯಲ್ಲಿ ಮೊದಲ ಮಳೆಯಾಗುತ್ತದೆ. ಸಾಗರಕ್ಕೆ ಎದುರಾಗಿರುವ ಹೋಟೆಲ್ ನಲ್ಲಿ ಇಳಿದುಕೊಳ್ಳಬಹುದು ಮತ್ತು ಚಂಡಮಾರುತವನ್ನು ನೋಡಿ. ಕೇರಳದ ಕೋವಲಂ ಸಮೀಪದಲ್ಲಿ, ಮಾನ್ಸೂನ್ನ ಶಕ್ತಿಯುತ ಆಗಮನವನ್ನು ಅನುಭವಿಸಲು ಅತ್ಯುತ್ತಮ ಸ್ಥಳವಾಗಿದೆ.

ಮಾನ್ಸೂನ್ ಒಂದೇ ಬಾರಿಗೆ ಕಾಣಿಸಿಕೊಳ್ಳುವುದಿಲ್ಲ. ಬದಲಿಗೆ, ಇದು "ಪೂರ್ವ ಮುಂಗಾರು ಮಳೆ" ಒಂದೆರಡು ದಿನಗಳಲ್ಲಿ ಬರುತ್ತದೆ. ಇದರ ನಿಜವಾದ ಬರುವನ್ನು ಭಾರೀ ಮಳೆ, ಉತ್ಕರ್ಷದ ಗುಡುಗು ಮತ್ತು ಸಾಕಷ್ಟು ಮಿಂಚಿನಿಂದ ತೋರಿ ಜನರಲ್ಲಿ ಅದ್ಭುತವಾದ ಚೈತನ್ಯವನ್ನು ತುಂಬುತ್ತದೆ ಮತ್ತು ಮಕ್ಕಳು ಓಡುವುದು, ಮಳೆಯಲ್ಲಿ ನೃತ್ಯ ಮಾಡುವುದು ಮತ್ತು ಆಟವಾಡುವುದನ್ನು ನೋಡುವುದು ಸಾಮಾನ್ಯವಾಗಿದೆ. ಇದು ತುಂಬಾ ರಿಫ್ರೆಶ್ ಆಗಿರುವುದರಿಂದ ವಯಸ್ಕರು ಸಹ ಸೇರುತ್ತಾರೆ.

ಮೊದಲ ಆರಂಭಿಕ ಮಳೆಯ ನಂತರ, ಇದು ದಿನಗಳವರೆಗೆ ಇರುತ್ತದೆ, ಮಾನ್ಸೂನ್ ಹೆಚ್ಚಿನ ದಿನಗಳಲ್ಲಿ ಕನಿಷ್ಠ ಒಂದೆರಡು ಗಂಟೆಗಳ ಕಾಲ ಸ್ಥಿರವಾದ ಮಳೆ ಬೀಳುತ್ತದೆ. ಇದು ಒಂದು ನಿಮಿಷ ಬಿಸಿಲು ಮತ್ತು ಮತ್ತೆ ಮಳೆ ಸುರಿಯುವುದು ಸಾಮಾನ್ಯ . ಮಳೆಯು ತುಂಬಾ ಅನಿರೀಕ್ಷಿತವಾಗಿದೆ. ಕೆಲವು ದಿನಗಳಲ್ಲಿ ಕಡಿಮೆ ಮಳೆಯಾಗುತ್ತದೆ, ಮತ್ತು ಈ ಸಮಯದಲ್ಲಿ ತಾಪಮಾನವು ಮತ್ತೆ ಬಿಸಿಯಾಗಲು ಪ್ರಾರಂಭವಾಗುತ್ತದೆ ಮತ್ತು ತೇವಾಂಶದ ಮಟ್ಟವು ಹೆಚ್ಚಾಗುತ್ತದೆ. ಜುಲೈನಲ್ಲಿ ಹೆಚ್ಚಿನ ಪ್ರದೇಶಗಳಲ್ಲಿ ಮಳೆಯ ಪ್ರಮಾಣವು ಉತ್ತುಂಗಕ್ಕೇರುತ್ತದೆ ಮತ್ತು ಆಗಸ್ಟ್ ನಲ್ಲಿ ಸ್ವಲ್ಪ ಕಡಿಮೆಯಾಗಲು ಪ್ರಾರಂಭಿಸುತ್ತದೆ. ಸಾಮಾನ್ಯವಾಗಿ ಸೆಪ್ಟೆಂಬರ್ ನಲ್ಲಿ ಕಡಿಮೆ ಮಳೆಯಾದರೂ, ಬರುವ ಮಳೆಯು ಹೆಚ್ಚಾಗಿ ಧಾರಾಕಾರವಾಗಿರುತ್ತದೆ.

ದುರದೃಷ್ಟವಶಾತ್, ಮಾನ್ಸೂನ್ ಆರಂಭದಲ್ಲಿ ಮತ್ತು ಭಾರೀ ಮಳೆಯ ಸಮಯದಲ್ಲಿ ಅನೇಕ ನಗರಗಳು ಪ್ರವಾಹಕ್ಕೆ ಒಳಗಾಗುತ್ತವೆ. ಚರಂಡಿಗಳು ನೀರಿನ ಪ್ರಮಾಣವನ್ನು ನಿಭಾಯಿಸಲು ಸಾಧ್ಯವಾಗದಿರುವುದು ಇದಕ್ಕೆ ಕಾರಣ, ಆಗಾಗ್ಗೆ ಬೇಸಿಗೆಯಲ್ಲಿ ಒಗೆದ ಕಸದ ಕಾರಣ ಮತ್ತು ಸರಿಯಾಗಿ ತೆರವುಗೊಳಿಸಲಾಗಿಲ್ಲ.

**ಮಾನ್ಸೂನ್ ಸಮಯದಲ್ಲಿ ಭಾರತದಲ್ಲಿ ಎಲ್ಲಿ ಹೆಚ್ಚು ಮಳೆಯಾಗುತ್ತದೆ?**

ಮಾನ್ಸೂನ್ ಸಮಯದಲ್ಲಿ ಕೆಲವು ಪ್ರದೇಶಗಳು ಇತರರಿಗಿಂತ ಹೆಚ್ಚು ಮಳೆಯನ್ನು ಪಡೆಯುತ್ತವೆ ಎಂಬುದನ್ನು ಗಮನಿಸುವುದು ಮುಖ್ಯ. ಭಾರತದ ಪ್ರಮುಖ ನಗರಗಳಲ್ಲಿ ಮುಂಬೈ ನೈಋತ್ಯ ಮಾನ್ಸೂನ್ ಸಮಯದಲ್ಲಿ ಅತಿ ಹೆಚ್ಚು ಮಳೆಯನ್ನು ಪಡೆಯುತ್ತದೆ. ಕೋಲ್ಕತ್ತಾದಲ್ಲಿ ಸಾಕಷ್ಟು ಮಳೆಯಾಗುತ್ತಿತ್ತು ಆದರೆ ಇತ್ತೀಚಿನ ವರ್ಷಗಳಲ್ಲಿ ಇದು ಕಡಿಮೆಯಾಗಿದೆ, ಈಶಾನ್ಯ ಮಾನ್ಸೂನ್ ಹೆಚ್ಚು ಮಳೆಯನ್ನು ತರುತ್ತದೆ.

ಪೂರ್ವ ಹಿಮಾಲಯ ಪ್ರದೇಶ, ಡಾರ್ಜಿಲಿಂಗ್ ಮತ್ತು ಶಿಲ್ಲಾಂಗ್ (ಮೇಘಾಲಯದ ರಾಜಧಾನಿ) ಸುತ್ತಮುತ್ತಲಿನ ಪ್ರದೇಶವು ಮಾನ್ಸೂನ್ ಸಮಯದಲ್ಲಿ ಭಾರತದಲ್ಲಿ ಮಾತ್ರವಲ್ಲದೆ ಇಡೀ ಪ್ರಪಂಚದಲ್ಲಿ ಅತ್ಯಂತ ಮುಖ್ಯ ಪ್ರದೇಶಗಳಲ್ಲಿ ಒಂದಾಗಿದೆ. ಏಕೆಂದರೆ ಮಾನ್ಸೂನ್ ಹಿಮಾಲಯ ಶ್ರೇಣಿಯ ಕಡೆಗೆ ಸಾಗುತ್ತಿರುವಾಗ ಬಂಗಾಳಕೊಲ್ಲಿಯಿಂದ ಹೆಚ್ಚುವರಿ ತೇವಾಂಶವನ್ನು ಪಡೆದುಕೊಳ್ಳುತ್ತದೆ. ನೀವು ನಿಜವಾಗಿಯೂ ಮಳೆಯನ್ನು ಪ್ರೀತಿಸದ ಹೊರತು, ಮಾನ್ಸೂನ್ ಸಮಯದಲ್ಲಿ ಈ ಪ್ರದೇಶಕ್ಕೆ ಪ್ರಯಾಣವನ್ನು ಖಂಡಿತವಾಗಿ ತಪ್ಪಿಸಬೇಕು! ನೀವು ಹಾಗೆ ಮಾಡಿದರೆ, ಮೇಘಾಲಯದ ಚಿರಾಪುಂಜಿ ನಿಮಗೆ ಸ್ಥಳವಾಗಿದೆ (ಇದು ವಿಶ್ವದಲ್ಲೇ ಅತಿ ಹೆಚ್ಚು ಮಳೆಯನ್ನು ಪಡೆಯುವ ಗೌರವವನ್ನು ಹೊಂದಿದೆ).

**ಮಾನ್ಸೂನ್ ಸಮಯದಲ್ಲಿ ಭಾರತದಲ್ಲಿ ಎಲ್ಲಿ ಕಡಿಮೆ ಮಳೆಯಾಗುತ್ತದೆ?**

ಪ್ರಮುಖ ನಗರಗಳಿಗೆ ಸಂಬಂಧಿಸಿದಂತೆ, ದೆಹಲಿ, ಬೆಂಗಳೂರು ಮತ್ತು ಹೈದರಾಬಾದ್ ಹೋಲಿಕೆಯಿಂದ ಕಡಿಮೆ ಮಳೆಯನ್ನು ಪಡೆಯುತ್ತವೆ. ನೈಋತ್ಯ ಮಾನ್ಸೂನ್ ಸಮಯದಲ್ಲಿ ಚೆನ್ನೈ ಹೆಚ್ಚು ಮಳೆಯನ್ನು ಪಡೆಯುವುದಿಲ್ಲ, ಏಕೆಂದರೆ ತಮಿಳುನಾಡು ತನ್ನ ಹೆಚ್ಚಿನ ಮಳೆಯನ್ನು ಈಶಾನ್ಯ ಮಾನ್ಸೂನ್ನಿಂದ ಅಕ್ಟೋಬರ್ ನಿಂದ ಡಿಸೆಂಬರ್ ವರೆಗೆ ಪಡೆಯುತ್ತದೆ. ಕೇರಳ, ಕರ್ನಾಟಕ ಮತ್ತು ಆಂಧ್ರಪ್ರದೇಶಗಳು ಸಹ ಈ ಮಾನ್ಸೂನ್ ಅನ್ನು ಅನುಭವಿಸುತ್ತವೆ, ಜೊತೆಗೆ ನೈಋತ್ಯ ಮಾನ್ಸೂನ್ ಸಮಯದಲ್ಲಿ ಭಾರೀ ಮಳೆಯಾಗುತ್ತದೆ.

ಕಡಿಮೆ ಮಳೆಯನ್ನು ಪಡೆಯುವ ಮತ್ತು ಮಾನ್ಸೂನ್ ಸಮಯದಲ್ಲಿ ಹೆಚ್ಚು ಪ್ರಯಾಣ ಮಾಡಲು ಸೂಕ್ತವಾದ ಪ್ರದೇಶಗಳೆಂದರೆ ಮರುಭೂಮಿ ರಾಜ್ಯ ರಾಜಸ್ಥಾನ, ಪಶ್ಚಿಮ ಘಟ್ಟಗಳ ಪರ್ವತ ಶ್ರೇಣಿಯ ಪೂರ್ವ ಭಾಗದಲ್ಲಿರುವ ಡೆಕ್ಕನ್ ಪ್ರಸ್ಥಭೂಮಿ ಮತ್ತು ದೂರದ ಉತ್ತರ ಭಾರತದ ಲಡಾಕ್.

# ಕೃಷ್ಣಾಮೃತ

✍ ವನಜಾರಾಜನ್

ಶ್ರೀಕೃಷ್ಣ ಪರಮಾತ್ಮನಿಗೆ ಸಂಬಂಧವಿಲ್ಲದ ವಸ್ತುಗಳನ್ನು, ಯೋಚನೆಗಳನ್ನು, ಭಾವನೆಗಳನ್ನು ಶಾಶ್ವತವೆಂದು ನಂಬಿ ನಾವು ಕೆಟ್ಟಿದ್ದೇವೆ ಎಂದರೆ ಪ್ರಾಯಶಃ ತಪ್ಪಾಗಲಾರದು. 'ಸತ್ಯ'ವಾವುದು 'ಮಿಥ್ಯ'ವಾವುದು ತಿಳಿಯದೆ ತೊಳಲಾಡುತ್ತಿರುವುದು ದುಃಖಕರ ಸಂಗತಿ. (We do not know the difference between Eternal and Ephemeral). ಭವದ ನಂಟು ಬಂಧನಕ್ಕೆ ಅಂಟಿಕೊಂಡು 'ಭವರೋಗ ವೈದ್ಯ'ನನ್ನು ಮರೆತಂತಿದೆ!

ನಮ್ಮ 'ಶರೀರ' ಒಂದೇ ಏನು ನಾವು ಅನುಭವಿಸುತ್ತಿರುವ ಭೋಗ-ಭಾಗ್ಯವೆಲ್ಲವೂ ಪರಮಾತ್ಮ ಶ್ರೀಕೃಷ್ಣನ ಕೊಡುಗೆಗಳು 'ನಮ್ಮ ದೇಹವೇ ದೇಗುಲ"ವೆನ್ನುತ್ತಾರೆ. ವಚನಕಾರರು. 'ಮಾನವ ಜನ್ಮ ದೊಡ್ಡದು' ಎಂಬುದಾಗಿ ದಾಸರು ಹಾಡಿ ಹೊಗಳಿದ್ದಾರೆ. ಶರೀರ ಮಾಧ್ಯಮಂ ಖಲು ಧರ್ಮ ಸಾಧನಂ" ಎಂದು 'ಭಗವದ್ಗೀತೆ'ಯಲ್ಲಿ ಶ್ರೀ ಕೃಷ್ಣನು ಅರಿವು ಮೂಡಿಸಿದ್ದಾನೆ. ನಮ್ಮ 'ಜೀವನದ ಹಾದಿ'ಯನ್ನು ಸುಗಮಗೊಳಿಸಲು ಅಗಣಿತ ಸುಖ – ಸೌಲಭ್ಯ - ಸೌಕರ್ಯಗಳನ್ನು ವರವಾಗಿ ನೀಡಿರುವುದು ನಮ್ಮ ಸೌಭಾಗ್ಯವಲ್ಲದೆ ಮತ್ತೇನು? ಆದ್ದರಿಂದ "ಹರಿಯ ಕರುಣೆದೊಳಾದ ಭಾಗ್ಯವ ಹರಿ ಸಮರ್ಪಣೆ ಮಾಡಿ ಬದುಕಿರೋ," ಎಂಬುದಾಗಿ ಪುರಂದರದಾಸರು ಬುದ್ಧಿಮತಿಗಳನ್ನು ಹೇಳಿ ಎಚ್ಚರಿಸಿದ್ದಾರೆ.

ಎಲ್ಲವೂ 'ತನ್ನದೇ, ತನಗೆ ಸೇರಿದ್ದು', ಬೇಕು ಇನ್ನೂ ಬೇಕು, ಮತ್ತಷ್ಟು ಬೇಕೆಂಬ ಸ್ವಾರ್ಥ, ದುರಾಸೆಯಿಂದ ಪಡೆದುಕೊಂಡ ವಸ್ತುಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ಜೀವನವಿಡೀ ಅವುಗಳನ್ನು ಕಾಪಾಡುತ್ತಾ ಅಂಟಿಕೊಂಡಿರುವುದೇ ಒಂದು ರೀತಿಯ ಜಾಡ್ಯವಾಗಿ ಕಲತ್ತಾಗಿ ಪರಿಣಮಿಸಿದೆ. ಇಂದ್ರಿಯಗಳನ್ನು ತನ್ನ ಕಾಮನೆಗಳನ್ನು ಈಡೇರಿಸಿಕೊಳ್ಳುವ ಸಾಧನೆಗಳಾಗಿ ಬಳಸಿಕೊಂಡು ಶ್ರೀ ಕೃಷ್ಣನನ್ನೇ ಮರೆತಿದ್ದಾನೆ ಮನುಷ್ಯ. ಅವನ ಅಮೃತವಾಣಿ, ಅರಿವು, ತಿಳಿಯಬಯಸುವ ಭಗವದ್ಗೀತೆಯ ಸಾರ' ಎಷ್ಟರ ಮಟ್ಟಿಗೆ ನಾವು ಅರಿತು, ನಿತ್ಯ ಜೀವನದಲ್ಲಿ ಅಳವಡಿಸಿಕೊಂಡಿದ್ದೇವೆ? ಈಗ ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳಬೇಕಾಗಿದೆ!

ಪರಮಾತ್ಮ ಸರ್ವಾಂತರ್ಯಾಮಿ! ಎಲ್ಲೆಲ್ಲೂ ಇದ್ದಾನೆ, ಎಲ್ಲರಲ್ಲಿಯೂ ಇದ್ದಾನೆ"- ಈ ಜ್ಞಾನವು 'ಅರಿವು' ಮೂಡಬೇಕು. ಅಜ್ಞಾನವೆಂಬ ಕಿಮಿರ ಸರಿದು, ಸುಜ್ಞಾನದ ಬೆಳಕು ಮೂಡಬೇಕಾದರೆ ಆಧ್ಯಾತ್ಮಿಕ ಚಿಂತನೆಯ ಕಡೆಗೆ ಮನಸ್ಸು ಸರಿಯಬೇಕು. ಅಂತರಂಗದಲ್ಲಿ ನೆಲೆಗೊಂಡಿರುವ 'ಪರಮಾತ್ಮ'ನನ್ನು ಧ್ಯಾನಿಸಬೇಕು. ನಮ್ಮ ಬಾಳಿಗೆ ಅಂಟಿಕೊಂಡಿರುವ 'ನಂಟು' ಎಂಬ ಕೊಂಡಿಗಳಿಂದ ಕಳಚಿಕೊಂಡು ವಿಮುಕ್ತರಾಗಬೇಕಾದರೆ ದಿನ ನಿತ್ಯದಲ್ಲಿ ಕ್ಷಣ ಕ್ಷಣವೂ ಉಂಟಾಗುವ ಮನಸ್ಸಿನ ಗೊಂದಲ ತಳಮಳವೆಂಬ 'ಕುರುಕ್ಷೇತ್ರ'ದಲ್ಲಿ ಜಯಗಳಿಸಬೇಕಾದರೆ ಶ್ರೀ ಕೃಷ್ಣನ ಗೀತಾಮೃತದ ಹನಿ-ಹನಿಯನ್ನು ಆಸ್ವಾಧಿಸಿ, ಸಿಹಿಯನ್ನು ಸವಿಯಲೇ ಬೇಕಾಗುವುದು ಅನಿವಾರ್ಯವಾಗಿದೆ. ಆಧ್ಯಾತ್ಮಿಕ ಚಿಂತನ-ಮಂಥನದಲ್ಲಿ ಒಲವು ಬಳಸಿಕೊಳ್ಳಬೇಕು. ಈ ಮನೋಭಾವ ಬೆಳೆಸಿಕೊಂಡರೆ ಎಲ್ಲಾ ವಸ್ತುಗಳಲ್ಲೂ ಪರಮಾತ್ಮ ನನ್ನೇ ಕಾಣುತ್ತೇವೆ. ಪ್ರಕೃತಿ ಯಲ್ಲಿನ ಸುಂದರ ಸುಗಂಧ ಸುಮಗಳು, ಸ್ಪಟಿಕ ಮಣಿಯಂತೆ ಹೊಳೆಯುವ ಶುದ್ಧ ನೀರು ತಂಗಾಳಿ, ಜುಳು ಜುಳು ಹರಿಯುವ ನದಿ, ರಭಸದಿಂದ ಧುಮುಕುವ ಜಲಧಾರೆಗಳು, ಜಲಪಾತಗಳು, ಹಿಮಚ್ಛಾದಿತ ಪರ್ವತಗಳು ಎಲ್ಲದರಲ್ಲೂ ಪರಮಾತ್ಮನ ಕಮನೀಯ ರೂಪು, ಸೌಂದರ್ಯ ನಮ್ಮ ಮನಸ್ಸಿಗೆ ಮುದ ನೀಡುತ್ತವೆ. ಅವನ ಪಾದಾರವಿಂದಗಳಿಗೆ ಎಲ್ಲವನ್ನೂ ಸಮರ್ಪಿಸಿ ನಾವು ಆ ಮೂಲಕ ಸುಖಿಸಬೇಕು. ಆತ್ಮಾನಂದ ಪಡೆಯಬೇಕು. ಪದವಿ-ಸ್ಥಾನ-ಮಾನ ಮುಂತಾದ ಆಕರ್ಷಣೆಗಳಿಂದ ಪ್ರಲೋಭನೆಗಳಿಂದ ಪಾರಾಗಬೇಕಾದರೆ ಆಗ್ಗಿಂದಾಗ್ಗೆ ಅನುಶಾಸನ, ಸ್ವ-ಪರೀಕ್ಷೆಗಳಿಂದ ಶುಚಿರ್ಭೂತರಾಗಬೇಕು.

ಜಗತ್ತಿನ ಪುಟ್ಟ ಪುಟ್ಟ ಮುದ್ದಾದ ಮಕ್ಕಳೆಲ್ಲಾ ಶ್ರೀ ಕೃಷ್ಣನ ಸ್ವರೂಪವೇ ಆಗಿದ್ದಾರೆ. ಮಾತೆಯರು (ತಾಯಂದಿರು) ಮಕ್ಕಳ ಬಾಲ -ಲೀಲೆಗಳನ್ನು ಸವಿಯಬೇಕು. ಅವರನ್ನು 'ಯಶೋದೆ'ಗಳಾಗಿ ಲಾಲಿಸಿ-ಪಾಲಿಸಿ, ಮುದ್ದಿಸಿ ತೀಡಿ-ತಿದ್ದಿ ಒಳ್ಳೆಯ ನೈತಿಕ ಮೌಲ್ಯ (Moral Values) ಗಳನ್ನು ಉಣಿಸಬೇಕು. ಧ್ರುವ ಪ್ರಹ್ಲಾದರಂತವರ ಸ್ಫೂರ್ತಿದಾಯಕ ಕಥೆಗಳನ್ನು ಮಕ್ಕಳಿಗೆ ಕೇಳಿಸುವುದು. ಯೋಗ, ಧ್ಯಾನ, ಭಜನೆ ಇತ್ಯಾದಿಗಳು ಅವರ ಪಾಠ-ಪ್ರವಚನಗಳೊಡನೆ ಜೊತೆ ಜೊತೆಯಾಗಿ ಅವಿಭಾಜ್ಯ ಅಂಗವಾಗಿ ಅಳವಡಿಸಿಕೊಂಡಿದ್ದೇ ಆದರೆ ಶಾರೀರಿಕವಾಗಿಯೂ, ಮಾನಸಿಕವಾಗಿಯೂ, ಭಾವನಾತ್ಮಕವಾಗಿಯೂ ಮಕ್ಕಳ ಬೆಳವಣಿಗೆ ಸದೃಢವಾಗಿ ಆಗುವುದರಲ್ಲಿ ಸಂದೇಹವಿಲ್ಲ! ಜೀವನದ ಹಾದಿಯಲ್ಲಿ ಎಂತಹುದೇ ಸಮಸ್ಯೆ ಎದಿರಾದರೂ ಯಾರೂ ಅವರನ್ನು ಅಲ್ಲಾಡಿಸಲಾಗುವುದಿಲ್ಲ. ಸಾತ್ವಿಕ ಜೀವನ ಅವರುಗಳ ಆಯ್ಕೆ ಆಗುವುದು ನಿಸ್ಸಂಶಯ. ಕಾರಣವೆಂದರೆ ಈ ಮಕ್ಕಳಿಗೆ ಅವರ ಮಾತೆಯರು 'ನಂದತನಯ ಗೋವಿಂದನ ಭಜಿಪು' ದಾನಂದವಾದ ಮಿಠಾಯಿ ಚಿಕ್ಕಂದಿನಿಂದಲೂ ಆ ಮಕ್ಕಳಿಗೆ ಉಣಿಸಿ ಬೆಳೆಸಿದ್ದಾರೆ. ಅವರನ್ನು ಯಾವ ಜಾಡ್ಯವೂ ಎಂದೂ ಭಾದಿಸುವುದಿಲ್ಲ. ಭವರೋಗ ವೈದ್ಯನನ್ನು ಕಂಡುಕೊಂಡಿದ್ದಾರೆ. ಅವರೆಲ್ಲಾ 'ಬಾಲಕೃಷ್ಣ'ರೇ ಎಂದಾದ ಮೇಲೆ 'ಅವರ ಮಾತೆ ಯಶೋದೆ ತಾನೆ?'

# ಡಾ. ಜಿ. ಎನ್. ಉಪಾಧ್ಯ ಅವರ ಹನ್ನೆರಡು ಕೃತಿಗಳ ಲೋಕಾರ್ಪಣೆ

ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ ಅವರ ಹನ್ನೆರಡು ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮ ಎಪ್ರಿಲ್ 16ರಂದು ಶನಿವಾರ ಕಲಿನಾ ಕ್ಯಾಂಪಸ್ಸಿನ ಕವಿ ಕುಸುಮಾಗ್ರಜ ಮರಾಠಿ ಭಾಷಾ ಭವನದಲ್ಲಿ ನೆರವೇರಿತು. ಈ ಕಾರ್ಯಕ್ರಮದಲ್ಲಿ ಡಾ. ಜಿ. ಎನ್. ಉಪಾಧ್ಯ ವಿರಚಿತ ಮುಂಬಯಿ ಕನ್ನಡ ಸಾಹಿತ್ಯ ಚರಿತ್ರೆ ಎರಡು ಸಂಪುಟಗಳು, ಗೋದಾವರಿ ತೀರದಲ್ಲಿ ಕನ್ನಡದ ಕುರುಹುಗಳು, ಅನುಭಾವ ಸಾಹಿತ್ಯ ವಿಹಾರ, ಅನಿಕೇತನ ಪ್ರಜ್ಞೆ ಮತ್ತು ಕನ್ನಡ, ಸಾಹಿತ್ಯ ಮಾರ್ಗ, ಸೊನ್ನಲಿಗೆಯ ಸಿದ್ಧರಾಮ, ವಾಙ್ಮಯ ವಿವೇಕ (ಜನಾರ್ದನ ಭಟ್ ಸಾಹಿತ್ಯ ಸಮೀಕ್ಷೆ), ಮಾಯಾನಗರಿಯಲ್ಲಿ ಕನ್ನಡ ಡಿಂಡಿಮ, ಕನ್ನಡ ಕಲಿಯೋಣ ಬನ್ನಿ (8ನೇ ಆವೃತ್ತಿ), ಬಣ್ಣಗಳ ಮಾಂತ್ರಿಕ ದೇವುದಾಸ ಶೆಟ್ಟಿ (ಡಾ.ಪೂರ್ಣಿಮಾ ಶೆಟ್ಟಿ ಅವರೊಂದಿಗೆ), ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ ಅಥವಾ ಕನ್ಯಾ ವಿಕ್ರಯದ ಪರಿಣಾಮವು(ಸಂ) ಕೃತಿಗಳನ್ನು ಏಕಕಾಲದಲ್ಲಿ ಬಿಡುಗಡೆಗೊಳಿಸಲಾಯಿತು.



ಈ ಕಾರ್ಯಕ್ರಮದಲ್ಲಿ ಡಾ. ಭರತ್ ಕುಮಾರ್ ಪೊಲಿಪು, ಆರ್. ಕೆ. ಶೆಟ್ಟಿ, ಡಾ. ವಿಶ್ವನಾಥ ಕಾರ್ನಾಡ್, ಡಾ. ದಾಕ್ಷಾಯಣಿ ಯಡಹಳ್ಳಿ, ದಯಾನಂದ ಶೆಟ್ಟಿ, ಶ್ರೀನಿವಾಸ ಜೋಕಟ್ಟೆ, ಅಶೋಕ ಸುವರ್ಣ, ಮಿತ್ರಾ ವೆಂಕಟ್ರಾಜ್, ದೇವುದಾಸ ಶೆಟ್ಟಿ, ಅಮಿತಾ ಭಾಗ್ವತ್, ಡಾ. ರಾಧಾ ಅಯ್ಯರ್, ವಿಶ್ವನಾಥ ಶೆಟ್ಟಿ, ನಿತ್ಯಾನಂದ ಕೋಟ್ಯಾನ್ ಮೊದಲಾದವರು ಕೃತಿಗಳನ್ನು ಲೋಕಾರ್ಪಣೆ ಮಾಡಿದರು. ಕೃತಿಗಳ ಕುರಿತು ಡಾ. ರಮಾ ಉಡುಪ, ಡಾ. ಮಧುಸೂಧನ ರಾವ್, ಡಾ. ದಿನೇಶ್ ಶೆಟ್ಟಿ, ರೆಂಜಾಳ, ಶಶಿಕಲಾ ಹೆಗಡೆ, ಅನಿತಾ ಪೂಜಾರಿ, ಕಲಾ ಭಾಗ್ವತ್, ಗೀತಾ ಮಂಜುನಾಥ್, ಜಯ ಸಾಲ್ಯಾನ್, ಗೀತಾ ಹೇರಳ ಅವರು ಮಾತನಾಡಿದರು. ಕೃತಿಕಾರರಾದ ಡಾ. ಜಿ. ಎನ್. ಉಪಾಧ್ಯ ಅವರಿಗೆ ಕನ್ನಡ ವಿಭಾಗದ ವಿದ್ಯಾರ್ಥಿಗಳು ಗುರುವಂದನೆಯನ್ನು ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪಡೆದ ಡಾ. ವೈ. ವಿ. ಮಧುಸೂಧನ ರಾವ್ ಅವರನ್ನು ಗೌರವಿಸಲಾಯಿತು. ಅದೇ ರೀತಿ ಸಾಧನಕ್ರಿಗೆ ಗೌರವಾರ್ಪಣೆ ಕಾರ್ಯಕ್ರಮದಲ್ಲಿ ಮುಂಬಯಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಡಾ. ಶ್ರೀಧರ ಶೆಟ್ಟಿ (ಶಿಕ್ಷಣ), ಎಂ. ಟಿ. ಪೂಜಾರಿ (ಯಕ್ಷಗಾನ), ಕರ್ನಿರೆ ವಿಶ್ವನಾಥ ಶೆಟ್ಟಿ (ಸಮಾಜಸೇವೆ), ಕಡಂದಲೆ ಸುರೇಶ್ ಭಂಡಾರಿ (ಸಂಘಟನೆ) ಹಾಗೂ ನವೋದಯ ಕನ್ನಡ ಸೇವಾ ಸಂಘ, ಥಾಣೆ (ಶೈಕ್ಷಣಿಕ) ಇವರನ್ನು ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗದ ಪರವಾಗಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಅವರ ಪರಿಸರದ ಕುರಿತ ಕಾಳಜಿಯನ್ನು ಗಮನಿಸಿ ಕೆ. ಎಂ. ಸುವರ್ಣ ಅವರನ್ನು ವಿಶೇಷವಾಗಿ ಗೌರವಿಸಲಾಯಿತು.

ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಗೀತೆಯನ್ನು ಹಾಡಿ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು. ಕನ್ನಡ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ ಅವರು ಅತಿಥಿಗಳನ್ನು ಪರಿಚಯಿಸಿ, ಸ್ವಾಗತಿಸಿ ನಿರೂಪಿಸಿದರು. ಕನ್ನಡ ವಿಭಾಗದ ಸಂಶೋಧನ ವಿದ್ಯಾರ್ಥಿ ನಳಿನಾ ಪ್ರಸಾದ್ ಅವರು ಧನ್ಯವಾದ ಸಮರ್ಪಿಸಿದರು.

---

**ಪುಟ 3 ರಿಂದ . . .**

ಅದಕ್ಕೆ ಮುದುಕ, "ಅಂತಹ ಏನೂ ವಿಶೇಷವಿಲ್ಲ. ನಾನು ಎಂಬತ್ತು ವರ್ಷಗಳಿಂದ ಸಂತೋಷವನ್ನು ಹುಡುಕುತ್ತಾ, ಅದರ ಬೆನ್ನಟ್ಟಿದ್ದೆ ಮತ್ತು ಅದು ನಿಷ್ಪ್ರಯೋಜಕ ಎಂದು ಈಗ ಅರ್ಥವಾಯಿತು. ತದನಂತರ ನಾನು ಸಂತೋಷದ ಹುಡುಕಾಟವನ್ನು ಬಿಟ್ಟು ಬದುಕನ್ನು ನಿರ್ಣಯಿಸಿದೆ. ಹಾಗೇ ಜೀವನವನ್ನು ಆನಂದಿಸಲು ನಿರ್ಧರಿಸಿದೆ. ಅದಕ್ಕಾಗಿಯೇ ಇಂದು ನಾನು ಸಂತೋಷವಾಗಿದ್ದೇನೆ" ಎಂದನು.

ಹೌದು ಸುಖವನ್ನು ಬೆನ್ನಟ್ಟದೆ, ಇವತ್ತಿನ ದಿನವನ್ನು ಆನಂದಿಸಲು ಪ್ರಯತ್ನಿಸಿ, ಆಗ ನಿಮ್ಮ ಜೀವನ ತನ್ನಿಂದ ತಾನೆ ಸುಖಮಯವಾಗುತ್ತದೆ. ಜೀವನದಲ್ಲಿ ಎದುರಾಗುವ ಸಮಸ್ಯೆಗಳಿಗೆ ಎಷ್ಟು ದಿನ ಅಂತ ಹೆದರಿ ಓಡಿಹೋಗುವುದು. ಬರುವ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಬೇಕು. ಒಂದು ಜೋಕ್ ಅನ್ನು ಕೇಳಿ ಎಷ್ಟು ಸಲ ನಾವು ನಗಬಹುದು. ನಾವು ಪದೇ ಪದೇ ಒಂದೇ ಜೋಕ್ ಗೆ ನಗಲು ಸಾಧ್ಯವಿಲ್ಲ. ಹಾಗಾದರೆ ನೀವು ಯಾವಾಗಲೂ ಅದೇ ಸಮಸ್ಯೆಯ ಬಗ್ಗೆ ಏಕೆ ಅಳಬೇಕು? ನಮ್ಮ ಚಿಂತೆ ನಮ್ಮ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ. ಅದು ನಮ್ಮ ಸಮಯ ಮತ್ತು ಶಕ್ತಿಯನ್ನು ವ್ಯರ್ಥ ಮಾಡುತ್ತದೆ ಅಷ್ಟೆ. ಅದಕ್ಕೆ ಹಿರಿಯರು ಹೇಳಿದ್ದು, 'ಚಿಂತೆ ಚಿತೆಗೆ ಸಮ' ಅಂತ.

# DOES INDIA EVER LEARN FROM HISTORY?

- **Nesaru Insight**

We know of foreign invasions to India from 400 BC when Alexander entered India. At that time the soldiers of Alexander were very tired from their battles in Persia, as such even Puraorova lost, Alexander could not further invade into India. Later when his commander Selucus came, the Magadha/Maurya Empire was large and strong and as seek selueus lost and went back. Ashoka of Maurya descent built a large SINGLE Empire and as such there were no divisions within from current Afghanisthan / Kandahar to Kamaroopa and to Karnataka. An undivided force is very strong and stands resolutely against any invade.

But when Kanishka invades the Maurya Empire in on decline and many smaller Kingdoms, who were fighting against each other become easy pray. Similarly, when Taimur Lang invades the entire northwest in disarrary and become easy pray. Ghazni Mohammed does not come to Rule, but to loot. In this he succeeds because the north west is again divided into small kingdoms, which are fighting each other.

Gulami Dynasty again is able to concured Delhi because of infighting among Indian Kingdoms. Some of them support Kutub-ud-din. Alauddin Khilji is able to research entire South because the chola, Pallava, Pandian, Hoysala and a Vengi's are fighting each other.

When the Moghuls enter, many Rajputs actually support Babur and later Akbar and Jehangir. Even Aurangzeb is able to muster support from the Rajuput Indian Kingdoms.

Later as the Moghuls are in decline. The East India Company which enters India for trade is able to see the divided India and seek an opportunity. After Ranjit Singh passes away his generals are disloyal and support the British. The Maratha Empire which boasted of Hindu Power, support the British against Indian Kingdoms. In turn, the Marathas, Nizams, Rajuputs are all subjugated the British. There were many many Meer Sadaks all over India. So much so in 1905 the British King crowns himself as the Emperor in Delhi. All the Indian Kings com and salute him.

Currently we have the same situation prevailing in India. There are very few political parties which are not Dynastic and as such they do not have any nationalistic ideology or interest grabbing the power. Some parties havae aligned themselves, either with China or with Pakistan / ISIS. The current Communal divide is based on vote bank politics and not on prompting the development of any community, which anyway are poor.

This is an ideal situation for an invader to swing in and break the Indian unity. The border states of Punjab, Kashmir, Arunachal Pradesh, Assam, Nagaland, Manipur, Mizaram, Tamil Nadu are ripe with slogans for an independent State.

Unless we Indians learn lessons from our Histroy, we cannot preserve our Independence and Independent Culture. History is for learning lessons and not repeating earlier mistakes.

# HATE SPEECH

Nesaru - Good Thoughts

For some time, we are hearing instances of Hate Speech across the Country. Mostly these are directed against some Muslims. Heavily tired in this Multi-Faith Nation, we know that this should be condemned, as we also know there are many good Muslims amongst us.

But this Hate Speech is nothing new. Since 1930, when the so called Justice Party arose, we have been hearing Hate Speech against Brahmins. Brahmins did these atrocities against lower castes. Which Brahmins were these? It does not matter that these were yester year Brahmins. The wolf says “It may not be you, or your Father, how does it matter to me. I have to kill you for the deeds of your forefathers”. If we accept this seasoning, then even present day Muslims and Christians are also to be included for no fault of theirs, although it was either Taimur, Ghazni, Babur or Aurangzeb. This kind of reasoning is now applied for all present day Indians. This is not good. In Particular, Brahmins in Tamilnadu and Maharashtra and Kashmir are not only discriminated but are being driven out of the State. It is unfortunate that Maharashtra with its great tradition of inclusiveness has been the latest victim of this Hate speech. But it is not politically considered as Hate Speech.

All kinds of Hate Speeches should stop and of should work thousands the betterment of all of us. Each community has contributed to the culture and identify of this great country.

Let us unite and grow together with Love and Kindness.

## Unspoken Words

Cuckoo lightly missed

The beat of limping words
In the long tune of silence.
Infant Shabari gone hunchback
Untimely by the burden of regrets
Housed in thick wet wings.

Blind time delivers
The oars of sighs
Scratches incurable wounds
On inner walls of love
Grief remains imperishable.

Bushy memories rule
Either side of brittle banks
Obstinacy, a two-edged sword
Bleeds to weave a bearable life
Without shuttling bridges.
Long-time customers of pretense
Drowned unto neck
In the game of forced self-hurts.

…but
Life is not so long
To nurture the offspring
Of wrath, bear noxious fruits
In the hide of disgusting egos

Combat of clear eyes
Remains undone
To tear the fence of reticence
For a converse of inner depths.
A little lightning, some thunder
Before the utters
Of suppressed rain
Passionate streams
Blended with pain.

A chaste stamp of smile waits
On bathed flowers, leaves
Which can never return
To the womb of disinterested time.

✍ **Tha Sri Gururaj**

**Mob: 09343720378**

## ಯುದ್ಧ-ಬುದ್ಧ

ಮೈಬೆವರಿ ದಢಕ್ಕನೆ ಎದ್ದು ಕಣ್ಬಿಟ್ಟರೆ
ಗಾಢ ಕತ್ತಲಿನ ರಾಜ್ಯ
ಅಬ್ಬರ ಹಾಹಾಕಾರಗಳ ನಡುವೆ ಯಾವುದಾ ಸದ್ದು
ಹೃದಯಗಳ ಹಾದಿ ತಪ್ಪಿಸಿದ್ದು?

ಯಾವುದಾ ಜ್ವಾಲೆ ಹಸುರು ಅಂಗಳದ ಹೂಗಳ
ಸುಡಲು ಸುಡುನುಡಿಯಾದದ್ದು?

ಎಲ್ಲೋ ಸಿಡಿದ ಬಾಂಬಿನ ಬಿಸಿಗೆ
ಎಲ್ಲೆಲ್ಲಿಯವೋ ಕನಸುಗಳು ಕಮರಿದ್ದು
ಕಾಣದಷ್ಟು ಕುರುಡಾದವೇ ಕಣ್ಣು!

ನಮ್ಮ ಅಂಗಳಕೂ ಅಡರಿದ ಹೊಗೆ
ಉಸಿರುಗಟ್ಟಿಸಿ ಹೊರಬಂದೆ...

ಜಾತಿ-ಮತ-ಧರ್ಮಾಂಧತೆಯ ಮೆರವಣಿಗೆ

ಗಲ್ಲಿ-ಗಲ್ಲಿಯಲಿ ರಣಕೇಕೆ

ಹಸುಗೂಸುಗಳ ಎದೆಗೂ ರೋಗ ಹತ್ತಿಸುವ ಹವಣಿಕೆ
ಅನಾಥವಾಗಿವೆ ಭರವಸೆಯ ಹಾದಿ
ಮಹಾತ್ಮರ ಮೂರ್ತಿಯ ಕನ್ನಡಕಕ್ಕೆ
ಹತ್ತಿದ ಧೂಳು ತೊಳೆಯುವವರಿಲ್ಲ
ಮುಖದ ತುಂಬ ಮಡುಗಟ್ಟಿದ ಮೌನ!

ಸುತ್ತ ಮಾರಣ ಹೋಮ, ನೋವು, ಚೀರಾಟ

ನೊಂದವರು ನೋಯಿಸುವವರು ಎರಡೂ ಕಡೆ
ಹಮ್ಮಿನ ಗುರಾಣಿ ಹಿಡಿದು
ಎದುರುಬದುರು ನಿಂತಿದೆ ಒಡೆದ ಮನುಕುಲ
ರಕ್ತ ಚೆಲ್ಲಿದ ಹಾದಿಯುದ್ದಕೂ
ಯಾರವು ಹೆಜ್ಜೆಗುರುತು?

ನೋವುಗಳ ಬಿತ್ತಿ ಗೆಲುವಿಗೆ ಹಪಹಪಿಸುವ ಯುದ್ಧ
ಕಳೆದುಹೋದನೇ ಬುದ್ಧ!

ಪ್ರತಿ ಹನಿ ಕಣ್ಣೀರು, ರಕ್ತಕ್ಕೆ ಬಲಿಯಾಗಿದೆ ಬದುಕು...

ಬಾ ಬುದ್ಧ ಮತ್ತೊಮ್ಮೆ ಜೀವಪ್ರೀತಿಯ ಮೀಟು...

ಬೋಧಿವೃಕ್ಷದ ಬೇರು ಚಿಗುರಲಿ ಕುರುಡು
ಎದೆಗಳಲ್ಲಿ
ಹಸುರು ಕವಲೊಡೆದು ನೆರಳಾಗಲಿ ಜಗಕೆ
ಉಳಿಯಲಿ ಮನುಕುಲ ಶಾಂತಿಯ ಸಂಗದಲ್ಲಿ_

✍ **ಪೂರ್ಣಿಮಾ ಶ್ರೀನಿವಾಸ್,**
**ಕೆ,ಪಿ.ಎಸ್. ತ್ಯಾಮಗೊಂಡ್ಲು**
**Mob: 8296095236**

# ಶ್ರೀರಂಗ ರಂಗೋತ್ಸವ-2022

ಶ್ರೀರಂಗರ ನೆನಪಿನಲ್ಲಿ ಪ್ರತಿವರ್ಷವೂ ಮೈಸೂರು ಅಸೋಸಿಯೇಷನ್ ಜರುಗಿಸುವ ನಾಟಕೋತ್ಸವದ ಉದ್ಘಾಟನೆ, ಮೇ 02, 2022 ರಂದು ಅಸೋಸಿಯೇಷನ್‌ನಲ್ಲಿ ಜರುಗಿತು.



ಉದ್ಘಾಟನೆಯನ್ನು ಮಾಡಿದ ನಂತರ, ಅಧ್ಯಕ್ಷರಾದ ಶ್ರೀಮತಿ ಕಮಲಾರವರು, ಮುಖ್ಯ ಅತಿಥಿಗಳಾದ ಡಾ. ಉಷಾ ದೇಸಾಯಿ, ಹಾಗೂ ವಿಶೇಷ ಉಪನ್ಯಾಸಕರಾದ ಡಾ. ಭರತ್‌ಕುಮಾರ್ ಪೊಲಿಪು ಅವರನ್ನು ಸ್ವಾಗತಿಸಿ, ಶ್ರೀರಂಗರಂತಹ ಕಲಾವಿದ ಹಾಗೂ ನಾಟಕಕಾರರನ್ನು ಪ್ರತಿವರ್ಷ ನೆನಪು ಮಾಡಿಕೊಳ್ಳುವ ಭಾಗ್ಯ ಅಸೋಸಿಯೇಷನ್‌ಗೆ ಒದಗಿದೆ. ಅದರಲ್ಲೂ ಶ್ರೀರಂಗರ ಕುಟುಂಬದವರೇ ಇದರಲ್ಲಿ ಪಾಲ್ಗೊಳ್ಳುವುದು ಇದರ ಹೆಗ್ಗಳಿಕೆ ಎಂದರು.

ಡಾ. ಭರತ್‌ಕುಮಾರ್ ಪೊಲಿಪು ಅವರು, ಶ್ರೀರಂಗರ ಬಾಲ್ಯ ಶಿಕ್ಷಣ, ರಂಗ ಪರಿಶಿಕ್ಷಣ, ರಂಗ ಪರಿಶ್ರಮ ಹಾಗೂ ಅವರ ನೈತಿಕ ವಿಚಾರ ಧಾರೆಯನ್ನು ಕುರಿತು ವಿಶದವಾಗಿ ತಿಳಿಸಿದರು. ಅವರು ಪ್ರಾಥಮಿಕ ಶಿಕ್ಷಣವನ್ನು ಕರ್ನಾಟಕದಲ್ಲಿಯೇ ಮಾಡಿದ ಮೇಲೆ ಮಹಾರಾಷ್ಟ್ರದಲ್ಲಿ ಉಚ್ಚ ಶಿಕ್ಷಣ ಪಡೆದು ನಂತರ, ಲಂಡನ್ನಿನಲ್ಲಿಯೂ ಪರಿಶ್ರಮ ಮಾಡಿ, ಭಾರತೀಯ ಹಾಗೂ ಆಧುನಿಕ, ಬ್ರಿಟನ್ನಿನ ನಾಟಕಗಳಲ್ಲಿ ಅಧ್ಯಯನ ಮಾಡಿದರು. ವೈಚಾರಿಕತತ್ವಗಳನ್ನು ರಂಗದ ಮೇಲೆ ತೋರಬೇಕೆಂಬುದು ಅವರ ಆಶಯ. ನಮ್ಮ ಇಂದಿನ ಸಮಸ್ಯೆಗಳನ್ನು ಚರ್ಚೆಮಾಡುವುದೇ ರಂಗದ ದಿಟವಾದ ಗುರಿ ಎನ್ನುವುದು ಅವರ ತತ್ವ ಎಂದರು.

ಡಾ. ಉಷಾ ದೇಸಾಯಿಯವರು, ಕರೋನಾ ಸಮಯದಲ್ಲಿ ಎಲ್ಲಾ ಕಾರ್ಯಕ್ರಮಗಳಿಗೂ ತೊಂದರೆಯಾಗಿದ್ದರೂ ಕೂಡ, ಮೈಸೂರು ಅಸೋಸಿಯೇಷನ್‌ಗೆ ಎಡೆಬಿಡದೆ, ಶ್ರೀರಂಗೋತ್ಸವ ನಡೆಸಿಕೊಂಡು ಬರುತ್ತಿರುವುದು ನಿಜವಾಗಿಯೂ ಹೊಗಳುವಂತಹ ವಿಷಯ ಎಂದರು.





ಆಮೇಲೆ ಮೈಸೂರು ಅಸೋಸಿಯೇಷನ್ ಕಲಾ ತಂಡ "ಸಾಕಾರ" ನಾಟಕವನ್ನು ಆಡಿದರು. ಈ ಸಂಗೀತ ನಾಟಕದಲ್ಲಿ, ಅಸೋಸಿಯೇಷನ್ ನಾಲ್ಕು ಪೀಳಿಗೆಯ ಕಲಾವಿದರು ಭಾಗವಹಿಸಿದ್ದರು. ಹನ್ನೆರಡು ವರ್ಷದ ಎಳೆಯವರಿಂದ ಹಿಡಿದು 82 ವರ್ಷದ ಹಿರಿಯರ ವರೆಗಿನ ಕಲಾವಿದರು, ತಾವೇ ಹಾಡುತ್ತಾ, ಕುಣಿಯುತ್ತಾ, ಕಥಾ ನಿರೂಪಣೆ ಮಾಡುತ್ತ, "ದೇವರು ಅಂದರೆ ಯಾರು? ಎಲ್ಲಿರುವನು" ಎಂಬ ವೈಚಾರಿಕತೆಯನ್ನು, ಭಾವ ರೂಪದಿಂದ ಎಲ್ಲರಿಗೂ ಮುಟ್ಟಿಸಿದರು. ಈ ಮುಗ್ಧ ಭಾವದಿಂದ ಎಲ್ಲಾ ನೋಡುಗರೂ ತಲ್ಲೀನರಾದರು. ಕಲಾವಿದರು: ಶ್ರೀಯುತರಾದ ರಂಗನಾಥ್, ರಾಘವ್, ಭೀಮ್, ಶಶಿಕಾಂತ್ ಜೋಷಿ, ಮಂಜುನಾಥಯ್ಯ ಶ್ರೀಮತಿಯರಾದ ವೀಣಾ ಜೋಶಿ, ಲಕ್ಷ್ಮೀ ಸೀತಾರಾಮ್, ಶ್ಯಾಮಲಾ ರಾಧೇಶ್





ಕುಮಾರ : ಸುಶಾಂತ್, ಚಿತ್ರರಥ, ಸಾಯಿತೇಜ್, ಸಾಯಿನಾಥ್

ವಾದ್ಯ : ಸಚಿನ್ ಮೋರೆ

ಕುಮಾರಿ : ಮೈತ್ರಿ ರಾಧೇಶ್, ಮಹತಿ ರಾಧೇಶ್, ಹರ್ಷಿತಾ

ಮೇಕಪ್ : ಕಿರಣ್ ಘಡಿಗಾಂಕರ್, ನಿಶಿಕಾಂತ್

ಶ್ರೀರಂಗ ರಂಗೋತ್ಸವದ ಎರಡನೆಯ ದಿನ 3-5-2022ರಂದು ಮರಾಠಿ ನಾಟಕ **"ಮೋಸ್ಟ್ ವೆಲ್ಕಂ"** ಪ್ರದರ್ಶನಗೊಂಡಿತು. ರಚನೆ ಮತ್ತು ನಿರ್ದೇಶನ ಶ್ರೀ ಸುನಿಲ್ ಹರಿಶ್ಚಂದ್ರ.





ಶ್ರೀರಂಗ ರಂಗೋತ್ಸವದ ಮೂರನೆಯ ದಿನ 4-5-2022ರಂದು ಹಿಂದಿ ನಾಟಕ **"ಮೈ ಲೋಕಮಾನ್ಯ ತಿಲಕ್ ಹೂಂ".** ಪ್ರದರ್ಶನಗೊಂಡಿತು.

ರಚನೆ : ಖಾಲಿಖ಼ ಮುಸ್ತಾಕ್ ಅಹಮದ್,

ನಿರ್ದೇಶನ : ಮುಜೀಬ್ ಖಾನ್

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077